18 October 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಮನಸ್ಸು ಸಮುದ್ರವಿದ್ದಂತೆ, ಹೀಗಾಗಿ ಅದರ ಭಾವನೆಗಳ ಆಳ,ಅಗಲ ಅಳೆಯಲಾಗದು!

ಸ್ನೇಹಾ ಆನಂದ್

ಜಾಲ ಹೆಲಿರೈಡ್‌ಗೆ ಅನುಮತಿ ಕೊಡಿಸದ ಜಿಲ್ಲಾಡಳಿತ, ಸಚಿವರ ನಿರ್ಲಕ್ಷಕ್ಕೆ ನಿರಾಸೆ — ಪುಟ ಸಂ. 2

ಪುಟ ಸಂ. 3 — ಚಾಮರಾಜನಗರ ದಸರಾ ಮಹೋತ್ಸವ, ವಿವಿಧ ಕಾರ್ಯಕ್ರಮಗಳಿಗೆ ಚಾಲನೆ

ವಿಶೇಷಚೇತನರಿಗೆ ದೊರೆಯದ ಮಾಶಾಸನ। ವಿಪಕ್ಷ ನಾಯಕ ಕಿಡಿ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 299 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಅತ್ಯಾಚಾರ, ಕೊಲೆ: ಅಪರಾಧಿಗೆ ಗಲ್ಲು

ಪೋಕ್ಸೋ ವಿಶೇಷ ನ್ಯಾಯಾಲಯ ತೀರ್ಪು। ಅಪರಾಧಿ ಕಾರ್ತಿಕ್‌ಗೆ 1 ಲಕ್ಷ ದಂಡ

ಮೈಸೂರು: ಕಳೆದ ವರ್ಷ ಮೈಸೂರು ದಸರಾ ಸಂದರ್ಭ ಬಲೂನ್ ಮಾರಾಟ ಮಾಡಲು ಬಂದಿದ್ದ ಕುಟುಂಬದ ಹತ್ತು ವರ್ಷದ ಬಾಲಕಿಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದ ಪ್ರಕರಣದ ಅಪರಾಧಿ ಸಿದ್ದಲಿಂಗಪುರ ನಿವಾಸಿ ಕಾರ್ತಿಕ್ (31)ಗೆ ನಗರದ ಪೋಕ್ಸೋ ವಿಶೇಷ ನ್ಯಾಯಾಲಯ ಶನಿವಾರ ಮರಣದಂಡನೆ ಶಿಕ್ಷೆ ವಿಧಿಸಿದೆ.

ಉತ್ತರ ಕರ್ನಾಟಕದಿಂದ ಬಲೂನ್ ಮಾರಾಟ ಮಾಡಲು ಬಂದಿದ್ದ ಕುಟುಂಬ ನಗರದ ಇಟ್ಟಿಗೆಗೂಡಿನ ನಾಗಸ್ವಾಮಿ ದೇವ ಸ್ಥಾನದ ಬಳಿ ಇರುವ ಖಾಲಿ ಜಾಗದಲ್ಲಿ ಜೋಪಡಿ ಕಟ್ಟಿಕೊಂಡು ವಾಸವಿದ್ದರು.

ಕಳೆದ 2025ರ ಅ.9ರ ಮುಂಜಾನೆ ಜೋಪಡಿ ಪಕ್ಕದಲ್ಲೇ ಇದ್ದ ಚರಂಡಿಯಲ್ಲಿ 10 ವರ್ಷದ ಬಾಲಕಿ ಮೃತದೇಹ ಪತ್ತೆಯಾಗಿತ್ತು. ಮೃತ ಬಾಲಕಿಯ ತಾಯಿ ನೀಡಿದ ದೂರು ಆಧರಿಸಿ ನಜರ್‌ಬಾದ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿತ್ತು. ಬಾಲಕಿ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಲಾಗಿತ್ತು.

ಸಿಸಿಟಿವಿ ಕ್ಯಾಮೆರಾದಲ್ಲಿ ಆರೋಪಿ ಚಲನವಲನ ಗಮನಿಸಿ ಕಾರ್ತಿಕ್‌ನನ್ನು ಬಂಧಿಸಿದ್ದರು. ಮಹಜರು ವೇಳೆ ಆತನನ್ನು ಸಿದ್ದಲಿಂಗಪುರಕ್ಕೆ ಕರೆದೊಯ್ದು ವಾಪಸ್ ಬರುವಾಗ ಮೇಟಗಳ್ಳಿ ಬಳಿ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಪೊಲೀಸರು ಬಲಗಾಲಿಗೆ ಗುಂಡು ಹಾರಿಸಿ ಹಿಡಿದಿದ್ದರು. ತನಿಖೆ ಬಳಿಕ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದರು.

ಮೈಸೂರು ವೈದ್ಯಕೀಯ ಕಾಲೇಜಿನ ವಿಧಿವಿಜ್ಞಾನ ವಿಭಾಗದಲ್ಲಿ ನಡೆದ ಮರಣೊತ್ತರ ಪರೀಕ್ಷೆಯ ವರದಿ, ಬೆಂಗಳೂರು ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ನಡೆಸಿದ ಡಿಎನ್‌ಎ ಪರೀಕ್ಷೆ ಹಾಗೂ ಎಫ್‌ಎಸ್‌ಎಲ್ ವರದಿ ಆಧರಿಸಿ ನ್ಯಾಯಾಲಯ ಕಾರ್ತಿಕ್‌ನ್ನು ದೋಷಿ ಎಂದು ನಿರ್ಧರಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಆನಂದ್ ಪಿ. ಹೊಗಾಡೆ ಅವರು, ಆರೋಪಿ ಎಸಗಿದಅಪರಾಧ ಸಾಬೀತಾಗಿರುವುದರಿಂದ ಕಾರ್ತಿಕ್‌ಗೆ ಮರಣದಂಡನೆ ಪುಟ 2ಕ್ಕೆ

ಪರಾರಿಗೆ ಯತ್ನ: ಕಾಲಿಗೆ ಗುಂಡೇಟು

ಕೊಳ್ಳೇಗಾಲದಲ್ಲಿ ಕಾರ್ತಿಕ್ ನನ್ನು ಪೊಲೀಸರು ಬಂಧಿಸಿದ್ದರು. ಮೈಸೂರಿಗೆ ಕರೆದುಕೊಂಡು ಬಂದು ಪ್ರಾಥಮಿಕ ವಿಚಾರಣೆ ನಡೆಸಿದ್ದರು. ಬಳಿಕ ಹೆಚ್ಚಿನ ವಿಚಾರಣೆಗೆ ಪುನಃ ಈತನನ್ನು ಸಿದ್ದಲಿಂಗಪುರಕ್ಕೆ ಕರೆದುಕೊಂಡು ಹೋಗಿ ವಾಪಸ್ ಬರುವಾಗ ಮೇಟಗಳ್ಳಿ ಬಳಿ ಆತ ತಪ್ಪಿಸಿಕೊಳ್ಳಲು ಯತ್ನಿಸಿದ್ದ. ಈ ಸಂದರ್ಭ ಪೊಲೀಸರು ಆತನ ಬಲಗಾಲಿಗೆ ಗುಂಡು ಹಾರಿಸಿದ್ದರು. ಈ ಕಾರ್ಯಾಚರಣೆ ವೇಳೆ ಇಬ್ಬರು ಪೊಲೀಸರು ಗಾಯಗೊಂಡಿದ್ದರು.

ಕಾರ್ತಿಕ್ ಬಸ್ ಕ್ಲೀನರ್

ಕೊಲೆ ಅಪರಾಧಿ ಕಾರ್ತಿಕ್ ಬಸ್ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದ ಕೊಳ್ಳೇಗಾಲಕ್ಕೆ ಹೋಗುವ ಖಾಸಗಿ ಬಸ್ ಹತ್ತಿಳಿಯುತ್ತಿದ್ದ. ಅವನ ಮೇಲೆ 2 ಕ್ರಿಮಿನಲ್ ಪ್ರಕರಣಗಳಿವೆ. 2019ರಲ್ಲಿ ಕೊಳ್ಳೇಗಾಲದಲ್ಲಿ ಮಹಿಳೆಗೆ ಕಿರುಕುಳ ನೀಡಿದ ಪ್ರಕರಣದಲ್ಲಿ ಆರೋಪಿಗೆ 4 ವರ್ಷ ಶಿಕ್ಷೆ ಪ್ರಕಟವಾಗಿತ್ತು ಎಂದು ಪೊಲೀಸ್ ಕಮಿಷನರ್ ಮಾಹಿತಿ ನೀಡಿದ್ದರು.

ಪುಟ್ಟ ಕಂದನ ಸಾವಿಗೆ ನ್ಯಾಯ ಕೊಡಿಸಿದ ಆತ್ಮತೃಪ್ತಿ: ಜಯಂತಿ

ದಸರಾದಲ್ಲಿ ಬಲೂನ್ ಮಾರಲು ಬಂದಿದ್ದ ಬಾಲಕಿಯ ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ಮೈಸೂರು ಪೋಕ್ಸೋ ನ್ಯಾಯಾಲಯ ಐತಿಹಾಸಿಕ ತೀರ್ಪು ನೀಡಿದೆ. ಮೈಸೂರು ಜಿಲ್ಲಾ ಪೋಕ್ಸೋ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕಿ ಕೆ.ಬಿ.ಜಯಂತಿ ಬಾಲಕಿಯ ಪರ ವಾದ ಮಂಡಿಸಿದ್ದರು.

ಪುಟ್ಟ ಕಂದಮ್ಮನ ಸಾವಿಗೆ ನ್ಯಾಯ ಕೊಡಿಸಿರುವ ಆತ್ಮತೃಪ್ತಿ ಇದೆ ಎಂದು ಕೆ.ಬಿ.ಜಯಂತಿ ತಿಳಿಸಿದರು. ಕಳೆದ ಒಂದು ವರ್ಷದಿಂದ ವಿಚಾರಣೆ ನಡೆಯಿತು. ಆರೋಪಿಗೆ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ. ಅತ್ಯಾಚಾರ, ಕೊಲೆ ಹಾಗೂ ಸಾಕ್ಷ್ಯನಾಶ ಆಧಾರದ ಮೇಲೆ ಶಿಕ್ಷೆ ವಿಧಿಸಲಾಗಿದೆ. ಈ ಪ್ರಕರಣದಲ್ಲಿ ಡಿಜಿಟಲ್ ಸಾಕ್ಷಿಗಳು ಪ್ರಮುಖ ಪಾತ್ರ ವಹಿಸಿವೆ. ಇದರ ಜೊತೆಗೆ ಮೆಡಿಕಲ್ ಎವಿಡೆನ್ಸ್ ಸೇರಿ ಅನೇಕ ಸಾಕ್ಷಿಗಳು ಸಿಕ್ಕಿದ್ದವು ಎಂದು ತಿಳಿಸಿದರು.

ಆರೋಪಿ ಆಟೋ ಡ್ರೈವರ್ ಬಳಿ ಘಟನೆ ಕುರಿತು ತಿಳಿಸಿದ್ದ. ಆಟೋ ಡ್ರೈವರ್ ಸಾಕ್ಷಿ ಕೂಡ ಸಿಕ್ಕಿತು. ಪೊಲೀಸರು 24 ಗಂಟೆ ಒಳಗಾಗಿ ಆರೋಪಿಯನ್ನು ಬಂಧನ ಮಾಡಿದ್ದರು. ವಿಚಾರಣೆ ವೇಳೆ ನಾನು ತಪ್ಪು ಮಾಡಿಲ್ಲ ಅಂತ ಹೇಳುತ್ತಿದ್ದ. ಯಾವುದೇ ಆರೋಪಿ ತಪ್ಪನ್ನು ಒಪ್ಪಿಕೊಳ್ಳಲ್ಲ. ಕೃತ್ಯಕ್ಕೆ ಬಳಸಿದ್ದ ಚಾಕು ಕೂಡ ಆತನ ಬಳಿಯೇ ಇತ್ತು. ಇದೆಲ್ಲವನ್ನೂ ಪೊಲೀಸರು ವಶಕ್ಕೆ ಪಡೆದು ದೋಷರೋಪ ಪಟ್ಟಿ ಸಲ್ಲಿಸಿದ್ದರು ಎಂದು ತಿಳಿಸಿದರು. ಪುಟ 2ಕ್ಕೆ

ಸೌಮ್ಯಾರೆಡ್ಡಿ ರಾಜೀನಾಮೆ

ಬೆಂಗಳೂರು: ಕಳೆದ ಎರಡು ವರ್ಷಗಳಿಂದ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರಾಗಿದ್ದ ಸೌಮ್ಯಾ ರೆಡ್ಡಿ ತಮ್ಮ ಸ್ಥಾನಕ್ಕೆ ಶನಿವಾರ ದಿಢೀರ್ ರಾಜೀನಾಮೆ ನೀಡಿದ್ದಾರೆ.

2026ರ ಆಗಸ್ಟ್ 20ರಂದೇ ತಮ್ಮ ರಾಜೀನಾಮೆ ಪತ್ರವನ್ನು ಸೌಮ್ಯಾ ರೆಡ್ಡಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರವಾನಿಸಿದ್ದರು. ಡಿಕೆ ಶಿವಕುಮಾರ್ ಸಚಿವ ಸಂಪುಟದಲ್ಲಿ ಮಹಿಳೆಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಹೀಗಾಗಿ ಹೈಕಮಾಂಡ್ ಗಮನ ಸೆಳೆಯಲು ಮುಂದಾಗಿದ್ದು ತಮ್ಮ ರಾಜೀನಾಮೆ ಪತ್ರದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಬೇರೆಯವರನ್ನು ನೇಮಕ ಮಾಡುವವರೆಗೂ ಆ ಸ್ಥಾನದಲ್ಲಿ ಮುಂದುವರೆಯುವುದಾಗಿ ತಿಳಿಸಿದ್ದರು. ಮುಂದಿನ ರಾಜ್ಯ ವಿಧಾನಸಭೆ ಚುನಾವಣೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಸಾಮಾನ್ಯ ಕಾರ್ಯಕರ್ತೆಯಾಗಿ ಜವಾಬ್ದಾರಿ ನಿರ್ವಹಿಸಲು ಇಚ್ಛಿಸುತ್ತೇನೆ ಎಂದು ತಿಳಿಸಿದರು.

ನ.1ರಂದು ಕನ್ನಡ ರಾಜ್ಯೋತ್ಸವ ಕಡ್ಡಾಯ

ಬೆಂಗಳೂರು: ರಾಜ್ಯದ ಎಲ್ಲಾ ಶಾಲಾ–ಕಾಲೇಜು ಮತ್ತು ಖಾಸಗಿ ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರ ಅತ್ಯಂತ ಪ್ರಮುಖ ಹಾಗೂ ಕಡ್ಡಾಯ ಆದೇಶ ಹೊರಡಿಸಿದೆ.

ನವೆಂಬರ್ 1, 2026ರ ಕನ್ನಡ ರಾಜ್ಯೋತ್ಸವ ಭಾನುವಾರ ಬಂದಿದ್ದರೂ ಅಂದು ಯಾವುದೇ ಪುಟ 2ಕ್ಕೆ

ಸ್ಟಿಂಗ್ ಸೂತ್ರಧಾರಿ ಬಂಧಿಸಿ

ಡಿಜಿ ಕಚೇರಿ ಮುತ್ತಿಗೆಗೆ ಜೆಡಿಎಸ್ ಯತ್ನ

ಬೆಂಗಳೂರು: 'ಸ್ಟಿಂಗ್ ಆಪರೇಷನ್' ವಿಚಾರದಲ್ಲಿ ಜೆಡಿಎಸ್ ಕಾರ್ಯಕರ್ತರನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಡಿಜಿ ಕಚೇರಿಗೆ ಪಾದಯಾತ್ರೆ ಮೂಲಕ ತೆರಳಿ ಮುತ್ತಿಗೆಗೆ ಯತ್ನಿಸಿದರು. ಈ ವೇಳೆ ಫ್ರೀಡಂಪಾರ್ಕ್ ಬಳಿಯೇ ಪೊಲೀಸರು ಕುಮಾರಸ್ವಾಮಿ ಅವರನ್ನು ತಡೆದಿದ್ದಾರೆ. ಈ ವೇಳೆ ತಳ್ಳಾಟ ನೂಕಾಟ ನಡೆಯಿತು. ಭಾರೀ ಹೈಡ್ರಾಮಾವೇ ನಡೆಯಿತು.

ಅಂತಿಮವಾಗಿ ಪೊಲೀಸ್ ಮಹಾ ನಿರ್ದೇಶಕ ಎಂಎ ಸಲೀಂ ಅವರನ್ನು ಭೇಟಿಯಾದ ಕುಮಾರಸ್ವಾಮಿ, ಸ್ಟಿಂಗ್ ಷಡ್ಯಂತ್ರ ನಡೆಸಿದವರನ್ನು ತಕ್ಷಣವೇ ಬಂಧಿಸುವಂತೆ ಆಗ್ರಹಿಸಿದರು. ಅನಾವಶ್ಯಕವಾಗಿ ಜೆಡಿಎಸ್ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಸೂತ್ರಧಾರಿಯನ್ನು ಬಂಧಿಸದೆ, ಇನ್ಯಾರನ್ನೋ ಬಂಧಿಸಿ ಸರ್ಕಾರ ಕಳ್ಳಾಟ ಆಡುತ್ತಿದೆ. ತಕ್ಷಣವೇ ಎಸ್‌ಐಟಿ ರಚನೆ ಮಾಡಿ ತನಿಖೆ ನಡೆಯಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕುಮಾರಸ್ವಾಮಿ, ನಾನೇ ವಿಡಿಯೋ ಮಾಡಿದ್ದೇನೆಂದು ಕಿಂಗ್ ಪಿನ್ ಹೇಳಿದ್ದಾರೆ. ಇದನ್ನೆಲ್ಲ ನೋಡಿ ಸಿದ್ದರಾಮಯ್ಯ ರಕ್ತ ಕುದಿಯುತ್ತಿಲ್ವಾ? ಸಿದ್ದರಾಮಯ್ಯ ಅವರು ಯಾಕೆ ಸುಮ್ಮನಿದ್ದಾರೆ ಎಂದು ಪ್ರಶ್ನಿಸಿದರು.

ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ ಮತ್ತು ಸಿದ್ದರಾಮಯ್ಯ ಅವರ ವರ್ಚಸ್ಸಿಗೆ ಧಕ್ಕೆ ತರಲು ಹುನ್ನಾರ ನಡೆಸಲಾಗುತ್ತಿದೆ ಎಂದು ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಮೇಕೆದಾಟುಗೆ ಅನುದಾನ: ಡಿ.ಕೆ.ಶಿವಕುಮಾರ್ ಭರವಸೆ

ಮೈಸೂರು: ಮೇಕೆದಾಟು ಅಣೆಕಟ್ಟು ಯೋಜನೆಗೆ ಮುಂದಿನ ಬಜೆಟ್ ನಲ್ಲಿ ಅನುದಾನ ಮೀಸಲಿಡಲಾಗುವುದು. ಭೂಮಿ ಪೂಜೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಆರ್ ಎಸ್‌ನ ಬೃಂದಾವನ ಉದ್ಯಾನದಲ್ಲಿ ನಡೆದ ಕಾವೇರಿ ಆರತಿ ಕಾರ್ಯಕ್ರಮಕ್ಕೆ ಶಿವಕುಮಾರ್ ಚಾಲನೆ ನೀಡಿದರು.

ಮೇಕೆದಾಟು ಯೋಜನೆಗೆ ಅರಣ್ಯ ಇಲಾಖೆ ಪುಟ 2ಕ್ಕೆ

ಕೆಆರ್‌ಎಸ್ ಹೂಳು ತೆಗೆಸುವ ಕಾರ್ಯ

ಕೇಂದ್ರ ಜಲಶಕ್ತಿ ಸಚಿವರನ್ನು ಆಂಧ್ರಪ್ರದೇಶ, ತೆಲಂಗಾಣ ಸಿಎಂ ಹಾಗೂ ನಾನು ಸೇರಿ ಭೇಟಿ ಮಾಡಿದ್ದ ಸಂದರ್ಭದಲ್ಲಿ ಕಾವೇರಿ ಮತ್ತು ತುಂಗ ಭದ್ರ ಜಲಾಶಯಗಳಿಂದ ಹೂಳು ತೆಗೆಯಲು ಟೆಂಡರ್ ಕರೆಯಲು ಸೂಚಿಸಿದ್ದಾರೆ ಎಂದು ಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.ಆಂಧ್ರ ಪ್ರದೇಶ ಹಾಗೂ ತೆಲಂಗಾಣದಲ್ಲಿ ಈಗಾಗಲೇ ಹೂಳು ತೆಗೆಯುವ ಕಾರ್ಯ ಪ್ರಾರಂಭವಾಗಿದೆ. ಡ್ರಜ್ಜಿಂಗ್ ಮೆಶೀನ್ ತರಿಸಿ ಹೂಳು ತೆಗೆಸಿ, ಮರಳು ಹಾಗೂ ಮಣ್ಣನ್ನು ರೈತರಿಗೆ ಒದಗಿಸುವ ಕೆಲಸ ಮಾಡಲಾಗುತ್ತಿದೆ. ಸದ್ಯದಲ್ಲಿಯೇ ನಾನು ಹಾಗೂ ನೀರಾವರಿ ಸಚಿವರು ತೆಲಂಗಾಣಕ್ಕೆ ಭೇಟಿ ನೀಡಿ ಈ ಯೋಜನೆಯನ್ನು ವೀಕ್ಷಿಸಿ ನೀರು ವ್ಯರ್ಥವಾಗದಂತೆ ಪ್ರಯತ್ನ ಮಾಡಲಾಗುವುದು ಎಂದರು.

ಮೋದಿ ವಿರುದ್ಧ ಹೋರಾಟಕ್ಕೆ ಆರ್ಥಿಕ ನೆರವು: ಹರಿಪ್ರಸಾದ್

ಧಾರವಾಡ: ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ನಡೆಯುತ್ತಿರುವ 'ಕಾಕ್ರೋಚ್ ಜನತಾ ಪಾರ್ಟಿ' ಸೇರಿದಂತೆ ಯಾವುದೇ ಪ್ರತಿಭಟನೆಗೆ ಕಾಂಗ್ರೆಸ್ ಸದಸ್ಯರು ಆರ್ಥಿಕ ನೆರವು ನೀಡಲಿದ್ದಾರೆ ಎಂದು ಬಿ.ಕೆ.ಹರಿಪ್ರಸಾದ್ ವಿವಾದಿತ ಹೇಳಿಕೆ ನೀಡಿದ್ದಾರೆ.

ಮಾಧ್ಯಮಗಳ ಜೊತೆ ಶನಿವಾರ ಮಾತನಾಡಿದ ಹರಿಪ್ರಸಾದ್, ದೆಹಲಿಯಲ್ಲಿ ನಡೆಯುತ್ತಿರುವ ಸಿಜೆಪಿ ಪ್ರತಿಭಟನೆಗೆ ಕರ್ನಾಟಕ ಸರ್ಕಾರ ಹಣಕಾಸಿನ ನೆರವು ನೀಡುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯೆ ನೀಡಿದರು. ಪ್ರತಿಭಟನೆ ನಡೆಸುವುದು ಅಥವಾ ಬೆಂಬಲ ನೀಡುವುದು ನಮ್ಮ ಹಕ್ಕು ಎಂದು ತಿರುಗೇಟು ನೀಡಿದರು.

ಸಿಜೆಪಿ ಮತ್ತು ಕಾಂಗ್ರೆಸ್ ಒಂದೇ ಎಂದು ಸ್ವತಃ ಗೃಹ ಸಚಿವರೇ ಹೇಳಿದ್ದಾರೆ. ಬೆಂಗಳೂರು ಸೇರಿದಂತೆ ಇಲ್ಲಿ ಎಲ್ಲೆಡೆ ಪ್ರತಿಭಟನೆಗಳು ನಡೆಯುತ್ತಿವೆ. ಇವರು ಎಷ್ಟು ಹಣಕಾಸಿನ ನೆರವು ನೀಡುತ್ತಿದ್ದಾರೆ ಎಂಬುದನ್ನು ಬಹಿರಂಗಪಡಿಸಲಿ ಎಂದು ಕುಮಾರಸ್ವಾಮಿ ಆಗ್ರಹಿಸಿದ್ದರು.

ಸಿಜೆಪಿಗೂ ನಮಗೂ ಸಂಬಂಧವಿಲ್ಲ: ಜಾರಕಿಹೊಳಿ

ಬೆಂಗಳೂರು: ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಗೆ ಕಾಂಗ್ರೆಸ್‌ಗೂ ಯಾವುದೇ ಸಂಬಂಧವಿಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಜನರು ಸ್ವಯಂಪ್ರೇರಿತರಾಗಿ ಇಲ್ಲಿಗೆ ಬಂದಿದ್ದಾರೆ ಮತ್ತು ತಮ್ಮ ಖರ್ಚುಗಳನ್ನು ತಾವೇ ನೋಡಿಕೊಳ್ಳುತ್ತಿದ್ದಾರೆ. ಎಲ್ಲರ ಬಳಿಯೂ ಹಣವಿರುವುದಿಲ್ಲ. ಕೆಲವರು ತಮ್ಮ ಸ್ವಂತ ಹಣದಿಂದ ಇತರ ಹತ್ತು ಜನರಿಗೆ ಸಹಾಯ ಮಾಡುತ್ತಿರಬಹುದು. ಇದಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ. ನಮ್ಮ ಪ್ರತಿಭಟನೆ ಬೇರೆ, ಅವರ ಪ್ರತಿಭಟನೆ ಬೇರೆ ಎಂದು ಜಾರಕಿಹೊಳಿ ಹೇಳಿದರು.

ಕಬ್ಬು ಬೆಳೆಗಾರರಿಗೆ ಸಹಾಯ

ಬೆಂಗಳೂರು: ಕಬ್ಬು ಬೆಳೆಗಾರರದ್ದು ರಾಷ್ಟ್ರೀಯ ಸಮಸ್ಯೆ. ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ನಮ್ಮ ಕೈಲಾದ ಸಹಾಯ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದಲ್ಲಿ ಶನಿವಾರ ಸಿಎಂ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಬೆಳಗಾವಿಗೆ ಹೋಗುತ್ತಿದ್ದೇನೆ. ಪ್ರತಿಭಟನೆ ಮಾಡುತ್ತಿರುವ ಕಬ್ಬು ಬೆಳೆಗಾರರೊಂದಿಗೆ ಮಾತನಾಡುತ್ತೇನೆ. ಅವರ ಸಮಸ್ಯೆಗಳನ್ನು ಆಲಿಸುತ್ತೇನೆ ಎಂದರು.

ಮೈಸೂರಲ್ಲಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿರುವ ಬಗ್ಗೆ ಪ್ರಶ್ನಿಸಿದಾಗ ಸಿಎಂ, ಅವರನ್ನು ಭೇಟಿ ಮಾಡಿದ್ದು ಸತ್ಯ. ಸಿದ್ದರಾಮಯ್ಯನವರು ನಮ್ಮ ನಾಯಕರು. ಅವರನ್ನು ಭೇಟಿ ಮಾಡಿ ಕುಶಲೋಪರಿ ವಿಚಾರಿಸುವುದು ನನ್ನ ಕರ್ತವ್ಯ, ಜವಾಬ್ದಾರಿ ಎಂದು ಹೇಳಿದರು.

ದಸರಾ ಲೋಹದ ಹಕ್ಕಿಗಳ ಮೆರುಗು

ಮೈಸೂರು: ದಸರಾ ಮಹೋತ್ಸವದ ಅಂಗವಾಗಿ ಸೂರ್ಯಕಿರಣ್ ತಂಡದ ಲೋಹದ ಹಕ್ಕಿಗಳ ಕಲರವ ನಡೆಯುವ ಹಿನ್ನಲೆಯಲ್ಲಿ ಶನಿವಾರ ನಗರದಲ್ಲಿ ಪೂರ್ವತಾಲೀಮು ಅತ್ಯಂತ ಯಶಸ್ವಿಯಾಗಿ ನಡೆಯಿತು. ಐದು ನಿಮಿಷದಲ್ಲಿ 10 ರೀತಿಯ ವಿವಿಧ ಮಜಲುಗಳನ್ನು ಆಕಾಶದಲ್ಲಿ ಚಿತ್ರಿಸಿ ನೆರೆದಿದ್ದವರ ಮನಸ್ಸು ಗೆದ್ದವು. ಅ.19ರ ಏರ್ ಶೋ ತಾಲೀಮಿಗೆ ನಗರದ ಜನತೆ ತಮ್ಮ ಮನೆಯ ಮೇಲೆ ನಿಂತು ನೋಡಿದರು.

ಡಿಕೆಶಿಯೂ ಬಲಿಪಶು ಆಗಿರಬಹುದು!

ರಾಜಕೀಯ ಎದುರಾಳಿ ಬಗ್ಗೆ ಎಚ್.ಡಿ.ಕುಮಾರಸ್ವಾಮಿ ಉಲ್ಟಾ ಹೇಳಿಕೆ

ಬೆಂಗಳೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಸೇರಿ ರಾಜಕೀಯ ನಾಯಕರನ್ನು 'ಸ್ಟಿಂಗ್ ಆಪರೇಷನ್' (ರಹಸ್ಯ ಕಾರ್ಯಾಚರಣೆ) ವಿಡಿಯೋ ಬಳಸಿ ನಿಯಂತ್ರಣದಲ್ಲಿಡಲು ಕರ್ನಾಟಕದಲ್ಲಿ ಒಂದು ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.



ಲೋಕಭವನದಲ್ಲಿ ನೂತನ ರಾಜ್ಯಪಾಲರನ್ನು ಭೇಟಿಯಾದ ನಂತರ ಮಾಧ್ಯಮಗಳ ಜೊತೆ

ಜಾಲಿ ಹೆಲಿರೈಡ್‌ಗೆ ಅನುಮತಿಕೊಡಿಸದ ಜಿಲ್ಲಾಡಳಿತ, ಸಚಿವರ ನಿರ್ಲಕ್ಷ್ಯಕ್ಕೆ ನಿರಾಸೆ

ಮೈಸೂರು: ನಾಡಹಬ್ಬ ದಸರೆ ಹಬ್ಬದಲ್ಲಿ ಮಧ್ಯಮ ವರ್ಗದವರಿಗೂ ಆಗಸದಿಂದ ಮೈಸೂರು ನಗರದ ಸೌಂದರ್ಯವನ್ನು ಸವಿಯುವ ನಿಟ್ಟಿನಲ್ಲಿ ಸಿಎಂ ನೇತೃತ್ವದಲ್ಲೇ ಚರ್ಚೆಯಾಗಿದ್ದ ಜಾಲಿ ಹೆಲಿಕ್ಯಾಪ್ಟರ್ ರೈಡ್ ಜಾಗದ ಅನುಮತಿ ಕೊಡಿಸುವಲ್ಲಿ ಜಿಲ್ಲಾಡಳಿತ ವಿಫಲವಾದ ಹಿನ್ನೆಲೆಯಲ್ಲಿ ಹಾಗೂ ಸಚಿವರ ನಿರ್ಲಕ್ಷದ ಹಿನ್ನೆಲೆಯಲ್ಲಿ ಈ ಬಾರಿ ನಿರೀಕ್ಷಿತ ಹೆಲಿರೈಡ್ ಕಾರ್ಯಕ್ರಮ ರದ್ದಾಗಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಬಾರಿ ಸಾಕಷ್ಟು ಹೊಚ್ಚ ಹೊಸ ಕಾರ್ಯಕ್ರಮಗಳನ್ನು ಒಳಗೊಂಡ ವಿಭಿನ್ನ ದಸರಾ ಆಚರಣೆಗೆ ತಯಾರಿ ನಡೆಸಿದ್ದಾರೆ. ಅದರಲ್ಲಿ ಹೆಲಿಕ್ಯಾಪ್ಟರ್ ರೈಡ್ ಸಹ ಒಂದಾಗಿತ್ತು. ಸ್ವತಃ ಮೈಸೂರಿನಲ್ಲಿ ಸಿಎಂ ನೇತೃತ್ವದಲ್ಲಿ ನಡೆದ ಸಭೆಯಲ್ಲೂ ಸಹ ಹೆಲಿರೈಡ್‌ಗೆ ಸೂಕ್ತ ಅನುಮತಿ ನೀಡುವ ಭರವಸೆ ನೀಡಿ ಪತ್ರ ವ್ಯವಹಾರ ನಡೆಸಲಾಗಿತ್ತು. ಹೀಗಿದ್ದರೂ ಸಹ ಸ್ಥಳ ಅನುಮತಿ ಕೊಡಿಸಿಕೊಡುವಲ್ಲಿ ಜಿಲ್ಲಾಡಳಿತ ವಿಫಲವಾಗಿದೆ. ಅಲ್ಲದೆ, ಹೆಲಿಕ್ಯಾಪ್ಟರ್ ರೈಡ್ ಮಾಡಲು ಮುಂದಾಗಿದ್ದ ಸೊಸೈಟಿ ಮನವಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಅಸಹಕಾರದ ಹಿನ್ನೆಲೆಯಲ್ಲಿ ಹೆಲಿಕ್ಯಾಪ್ಟರ್ ರೈಡ್ ರದ್ದು ಮಾಡಿಕೊಳ್ಳಲಾಗಿದೆ.

ಗಂಗಾವತಿಯ ಶ್ರೀಶೇಷಾದ್ರಿ ಎಜುಕೇಷನಲ್ ಸೊಸೈಟಿ ಸಂಸ್ಥೆವತಿಯಿಂದ ನಗರದ ಆಲನಹಳ್ಳಿಯಲ್ಲಿರುವ ರಾಜವಂಶಸ್ಥರಿಗೆ ಸೇರಿದ ಲಲಿತ್ ಮಹಲ್ ಹೆಲಿಪ್ಯಾಡ್ ನಲ್ಲಿ ಹೆಲಿಕಾಪ್ಟರ್ ಜಾಯ್ ರೈಡ್ ನಡೆಸಲು ಉದ್ದೇಶಿಸಿದ್ದರು. ಈ ಸಂಬಂಧ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ, ಜಿಲ್ಲಾಧಿಕಾರಿ ಹಾಗೂ ರಾಜವಂಶಸ್ಥೆ ಪ್ರಮೋದದೇವಿ ಒಡೆಯರ್ ಅವರಿಗೂ ಪತ್ರ ಬರೆದಿದ್ದರು. ಹೀಗಿದ್ದರು ಸೂಕ್ತ ಸಹಕಾರದ ಅನುಮತಿ ಸಿಗದ ಹಿನ್ನೆಲೆಯಲ್ಲಿ ಹೆಲಿಕ್ಯಾಪ್ಟರ್ ರೈಡ್ ರದ್ದುಗೊಳಿಸಲಾಗಿದೆ.

ಜಿಲ್ಲಾಡಳಿತದಿಂದ ಹೇಳಿಸಿದರೆ ಅನುಮತಿ ನೀಡುವುದಾಗಿ ರಾಜವಂಶಸ್ಥರು ತಿಳಿಸಿದ್ದು, ಸದರಿ ವಿಚಾರವನ್ನು ಸೊಸೈಟಿಯವರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದು, ಜಿಲ್ಲಾಧಿಕಾರಿಗಳು ನಾವು ಕೇಳಲು ಬರುವುದಿಲ್ಲ ಎಂದು ನಿರಾಕರಿಸಿದ್ದಾರೆ. ಅಲ್ಲದೆ, ಈ ಸಂಬಂಧ ಮೂರು ಬಾರಿ ಸೊಸೈಟಿಯವರು ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿದ್ದು ಯಾವುದೇ ಪ್ರಯೋಜನವಾಗಿಲ್ಲ ಎನ್ನಲಾಗಿದೆ. ಅರಮನೆ ಹಾಗೂ ಜಿಲ್ಲಾಡಳಿತದ ಮುಸುಕಿನ ಗುದ್ದಾಟಕ್ಕೆ ದಸರೆಯಲ್ಲಿ ಹಕ್ಕಿಗಳಂತೆ ಕಡಿಮೆ ವೆಚ್ಚದಲ್ಲಿ ಹಾರಾಟ ಆಡಲು ಬಯಸಿದ್ದ ಸ್ಥಳೀಯರಿಗೆ ನಿರಾಸೆಯುಂಟಾಗಿದ್ದು, ಸಾಕಷ್ಟು ಮಂದಿ ಬೇಸರ ಹೊರ ಹಾಕಿದ್ದಾರೆ. ಈ ಸಂಬಂಧ ಇನ್ನಾದರೂ ಸಂಬಂಧ ಪಟ್ಟವರು ಇತ್ತ ಗಮನ ಹರಿಸುವರೇ ಎಂಬುದನ್ನು ಕಾದು ನೋಡಬೇಕಿದೆ.

ಅನುಮತಿ ಕೇಳದ ಜಿಲ್ಲಾಡಳಿತ

ಪ್ರಾರಂಭದಲ್ಲಿ ಲಲಿತ್ ಮಹಲ್ ಹೆಲಿಪ್ಯಾಡ್ ಮೈದಾನವನ್ನು ಹೆಲಿಕ್ಯಾಪ್ಟರ್ ರೈಡ್ ನಡೆಸಲು ನೀಡುವಂತೆ ಸೊಸೈಟಿಯವರು ರಾಜವಂಶಸ್ಥರ ಬಳಿ ಕೋರಿದ್ದಾರೆ. ಅದಕ್ಕೆ ಬಾಡಿಗೆ ನೀಡುವಂತೆ ಕೇಳಿದ್ದು, ನಾಡಹಬ್ಬದ ಅಂಗವಾಗಿ ಉಚಿತವಾಗಿ ನೀಡುವಂತೆ ಕೋರಿದ್ದಾರೆ. ಇದಕ್ಕೆ ರಾಜವಂಶಸ್ಥೆ ಪ್ರಮೋದದೇವಿ ಒಡೆಯರ್ ಜಿಲ್ಲಾಧಿಕಾರಿಗಳಿಂದ ಕೇಳಿಸುವಂತೆ ಹೇಳಿದ್ದಾರೆನ್ನಲಾಗಿದೆ. ಆದರೆ, ಜಿಲ್ಲಾಧಿಕಾರಿ ಹಾಗೂ ಜಿಲ್ಲಾಡಳಿತದಿಂದ ಕೇಳಲು ನಿರಾಕರಿಸಿದ ಹಿನ್ನೆಲೆಯಲ್ಲಿ ಹೆಲಿಕ್ಯಾಪ್ಟರ್ ರೈಡ್ ಅನುಮತಿಯಲ್ಲೇ ನಿಂತಿದೆ.

ಲಲಿತ್ ಮಹಲ್ ಹೆಲಿಪ್ಯಾಡ್‌ನಲ್ಲಿ ರೈಡ್ ನಡೆಸಲು ಉದ್ದೇಶ

ಗಂಗಾವತಿಯ ಶ್ರೀ ಶೇಷಾದ್ರಿ ಎಜುಕೇಷನಲ್ ಸೊಸೈಟಿ ವತಿಯಿಂದ ನಗರದ ಆಲನಹಳ್ಳಿಯಲ್ಲಿರುವ ರಾಜವಂಶಸ್ಥರಿಗೆ ಸೇರಿದ ಲಲಿತ್ ಮಹಲ್ ಹೆಲಿಪ್ಯಾಡ್ನಲ್ಲಿ ಹೆಲಿಕಾಪ್ಟರ್ ಜಾಯ್ ರೈಡ್ ನಡೆಸಲು ಉದ್ದೇಶಿಸಲಾಗಿತ್ತು. ಈ ಸಂಬಂಧ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಹಾಗೂ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಪತ್ರ ಬರೆಯಲಾಗಿತ್ತು. ಆದರೆ, ಸೂಕ್ತ ಸಹಕಾರ ಮತ್ತು ಅನುಮತಿ ದೊರೆಯದ ಹಿನ್ನೆಲೆಯಲ್ಲಿ ಹೆಲಿಕಾಪ್ಟರ್ ರೈಡ್ ರದ್ದುಗೊಳಿಸಲಾಗಿದೆ.

ಮೊದಲ ಪುಟದಿಂದ

ದಾಖಲೆ ಸಮಸ್ಯೆಗೆ ಅಧಿಕಾರಿ ಕ್ರಮ

ಹಾಡಿಗೆ ಭೇಟಿ ನೀಡಿದ ಅಧಿಕಾರಿ । ಶೀಘ್ರವೇ ದಾಖಲೆ ಕೊಡಿಸುವ ಭರವಸೆ

ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ಅಗತ್ಯ ದಾಖಲೆಗಳಿಲ್ಲದೆ ಸರ್ಕಾರದ ವಿವಿಧ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದ ಆದಿವಾಸಿ ಸಮುದಾಯಗಳ ಸಮಸ್ಯೆ ಕುರಿತು ವರ್ತಮಾನ ದಿನಪತ್ರಿಕೆ ಪ್ರಕಟಿಸಿದ್ದ ವರದಿಗೆ ಅಧಿಕಾರಿಗಳು ಸ್ಪಂದಿಸಿದ್ದಾರೆ.

ಡಿ.ಬಿ.ಕುಪ್ಪೆ ಹಾಗೂ ಎನ್.ಬೆಳತ್ತೂರು ಗ್ರಾ.ಪಂ ವ್ಯಾಪ್ತಿಯ ಹಾಡಿಗಳಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಹೇಶ್ ಭೇಟಿ ನೀಡಿ, ನಿವಾಸಿಗಳ ದಾಖಲೆಗಳ ಸ್ಥಿತಿಗತಿ ಪರಿಶೀಲನೆ ನಡೆಸಿದ್ದಾರೆ.

ಆದಿವಾಸಿ ಸಮುದಾಯದ ಅರ್ಹ ಫಲಾನುಭವಿಗಳಿಗೆ ಮುಖ್ಯಮಂತ್ರಿ ಗೃಹಭಾಗ್ಯ ಯೋಜನೆಯಡಿ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳ ಕೊರತೆ ಎದುರಾಗಿರುವುದನ್ನು ಗಮನಿಸಿದ್ದ ವರ್ತಮಾನ ದಿನಪತ್ರಿಕೆ, "ಆದಿವಾಸಿಗಳಿಗೆ ಗೃಹಭಾಗ್ಯ ಮರೀಚಿಕೆ" ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು. ವರದಿಯನ್ನು ಗಮನಿಸಿದ್ದ ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ ಡಾ.ಕೆ.ವೈಷ್ಣವಿ ಅವರು ಈ ಸಂಬಂಧ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಾಹಿತಿ ಕೇಳಿದ್ದರು.

ಇದರ ಬೆನ್ನಲ್ಲೇ, ಅಗತ್ಯ ದಾಖಲೆಗಳಿಲ್ಲದೆ ಆದಿವಾಸಿ ಕುಟುಂಬಗಳು ಅನುಭವಿಸುತ್ತಿರುವ ಸಂಕಷ್ಟದ ಕುರಿತು "ದಾಖಲೆಗಳಿಲ್ಲದೆ ಆದಿವಾಸಿಗಳು ಅತಂತ್ರ" ಎಂಬ ಶೀರ್ಷಿಕೆಯಡಿ ಸರಣಿ ವರದಿ ಪ್ರಕಟಿಸಲಾಗಿತ್ತು. ಆನೆಮಾಳ, ಗೋಳೂರು ಹಾಗೂ ತಿಮ್ಮನಹೊಸಹಳ್ಳಿ ಹಾಡಿಗಳಲ್ಲಿ ಪತ್ರಿಕೆ ನಡೆಸಿದ್ದ ಸಮೀಕ್ಷೆಯು ಜಾತಿ, ಆದಾಯ ಪ್ರಮಾಣಪತ್ರ, ಆಧಾರ್ ಕಾರ್ಡ್ ಹಾಗೂ ಪಡಿತರ ಚೀಟಿ ಇಲ್ಲದವರ ಹೆಸರನ್ನು ಬಹಿರಂಗಗೊಳಿಸಿತ್ತು. ವರದಿಗೆ ಸ್ಪಂದಿಸಿದ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಗಳವಾರ ತಿಮ್ಮನಹೊಸಹಳ್ಳಿ ಹಾಡಿಗೆ ಭೇಟಿ ನೀಡಿ ನಿವಾಸಿಗಳ ಬಳಿ ಇರುವ ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಅಲ್ಲದೆ, ಇಲಾಖೆಯಿಂದ ಓರ್ವ ಸಂಪನ್ಮೂಲ ವ್ಯಕ್ತಿಯನ್ನು ನಿಯೋಜಿಸಿ, ಡಿ.ಬಿ.ಕುಪ್ಪೆ, ಎನ್.ಬೆಳತ್ತೂರು ಗ್ರಾ.ಪಂ ವ್ಯಾಪ್ತಿಯ ಎಲ್ಲ ಹಾಡಿಗಳ ಮನೆ ಮನೆಗೆ ಭೇಟಿ ನೀಡಿ, ಯಾವ ಕುಟುಂಬಗಳ ಬಳಿ ಯಾವ ದಾಖಲೆಗಳಿಲ್ಲ ಎಂಬುದರ ಸಮಗ್ರ ಪಟ್ಟಿ ಸಿದ್ಧಪಡಿಸುವಂತೆ ಸೂಚಿಸಿದ್ದಾರೆ.

ಅಳಲು ತೋಡಿಕೊಂಡ ಅಧಿಕಾರಿ

ಪ್ರತಿಯೊಂದು ಸರ್ಕಾರಿ ಇಲಾಖೆಯೂ ತನ್ನದೇ ಆದ ಜವಾಬ್ದಾರಿ ಹೊಂದಿವೆ. ಜಾತಿ, ಆದಾಯ ಪ್ರಮಾಣ ಪತ್ರಗಳನ್ನು ವಿತರಿಸುವುದು ಕಂದಾಯ ಇಲಾಖೆಯ ಜವಾಬ್ದಾರಿ. ಗ್ರಾಮೀಣ ಪ್ರದೇಶಗಳಲ್ಲಿ ಬಸ್ ಸೌಲಭ್ಯ ಕಲ್ಪಿಸುವುದು ಸಾರಿಗೆ ಇಲಾಖೆಯ ಕರ್ತವ್ಯ. ಗ್ರಾಮೀಣ ಭಾಗದ ಜನರಿಗೆ ಅಗತ್ಯ ಮೂಲಸೌಕರ್ಯ ಹಾಗೂ ವಿವಿಧ ಸೌಲಭ್ಯಗಳನ್ನು ಒದಗಿಸುವಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ತನ್ನದೇ ಆದ ಪ್ರಮುಖ ಪಾತ್ರವಿದೆ. ಹೀಗೆ ಪ್ರತಿಯೊಂದು ಇಲಾಖೆಗಳು ತನ್ನದೇ ಆದ ಹೊಣೆಗಾರಿಕೆಯನ್ನು ಹೊಂದಿದ್ದರೂ, ಆದಿವಾಸಿಗಳಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಎದುರಾದಾಗ ಅದನ್ನು ಪರಿಹರಿಸುವ ಬದಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯತ್ತ ಬೆರಳು ತೋರಿಸುತ್ತಿದ್ದಾರೆ. ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸದೇ ನಮ್ಮನ್ನೇ ದೂರುತ್ತಿದ್ದಾರೆ ಎಂದು ತಹಶೀಲ್ದಾರ್ ವಿರುದ್ಧ ಪ.ವರ್ಗಗಳ ಕಲ್ಯಾಣಾಧಿಕಾರಿ ಮಹೇಶ್ ಅಸಮಾಧಾನ ವ್ಯಕ್ತಪಡಿಸಿ ಪತ್ರಿಕೆ ಜೊತೆಗೆ ಅಳಲು ತೋಡಿಕೊಂಡಿದ್ದಾರೆ.

ಆಧಾರ್, ಜಾತಿ-ಆದಾಯ ಪ್ರಮಾಣ ಪತ್ರಕ್ಕೆ ಕ್ರಮ

ಕೊಡಗು ಹಾಗೂ ನೆರೆಯ ಕೇರಳ ರಾಜ್ಯಕ್ಕೆ ಕೂಲಿ ಕೆಲಸಕ್ಕಾಗಿ ತೆರಳಿರುವ ಆದಿವಾಸಿ ಕುಟುಂಬದ ಸದಸ್ಯರನ್ನು ಮರಳಿ ಕರೆ ತರುವ ಪ್ರಯತ್ನಕ್ಕೆ ಸಮುದಾಯದ ಮುಖಂಡೆ ಮಂಜುಳಾ ಮುಂದಾಗಿದ್ದಾರೆ. ಆಧಾರ್ ಕಾರ್ಡ್ ಇಲ್ಲದವರನ್ನು ವಾಹನದ ಮೂಲಕ ಮೈಸೂರಿನ ಆಧಾರ್ ಕೇಂದ್ರಕ್ಕೆ ಕರೆದೊಯ್ದು ಒಂದೇ ದಿನದಲ್ಲಿ ಆಧಾರ್ ಕಾರ್ಡ್ ಮಾಡಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ಕಲ್ಯಾಣಾಧಿಕಾರಿ ಮಹೇಶ್ ತಿಳಿಸಿದ್ದಾರೆ.

ಪತ್ರಿಕೆ ವರದಿ ಉಲ್ಲೇಖಿಸಿ ನಿರ್ದೇಶಕರಿಗೆ ಪತ್ರ

ಜಾತಿ, ಆದಾಯ ಪ್ರಮಾಣ ಪತ್ರಗಳನ್ನು ವಿತರಿಸುವ ಅಧಿಕಾರ ತಮ್ಮ ವ್ಯಾಪ್ತಿಯಲ್ಲಿ ಇರುವುದರಿಂದ ಈ ಸಂಬಂಧ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದ್ದಾರೆ. ಪಡಿತರ ಚೀಟಿ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕರಿಗೂ ವರ್ತಮಾನ ದಿನಪತ್ರಿಕೆಯ ವರದಿಯನ್ನು ಉಲ್ಲೇಖಿಸಿ ಪತ್ರ ಬರೆದಿದ್ದಾರೆ.

ವರ್ತಮಾನ
ದಾಖಲೆಗಳಿಲ್ಲದೆ ಆದಿವಾಸಿಗಳು ಅತಂತ್ರ
ಸರ್ಕಾರದ ಸೌಲಭ್ಯಗಳ ಪಡೆಯುವಲ್ಲಿ ವಿಫಲ । ಅಧಿಕಾರಿಗಳ ನಿರ್ಲಕ್ಷ್ಯ ಆರೋಪ
ಆಧಾರ್ ಕಾರ್ಡ್ ಇಲ್ಲದ ನಿವಾಸಿಗಳು
ರೇಷನ್ ಕಾರ್ಡ್ ಇಲ್ಲದ ಹಾಡಿ ನಿವಾಸಿಗಳು

ಪಶ್ಚಿಮ ಬಂಗಾಳ ಚುನಾವಣೆ

ಮತದಾರರ ಪಟ್ಟಿ ಪರಿಷ್ಕರಣೆ ಆರಂಭ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಮುನ್ನ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಆರಂಭವಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ ಮತ್ತು ಅನರ್ಹ ಮತದಾರರ ಹೆಸರು ತೆಗೆದುಹಾಕಲು ಅವಕಾಶ ಕಲ್ಪಿಸಲಾಗಿದೆ. ಮತದಾರರ ಪಟ್ಟಿಯ ಪರಿಷ್ಕರಣೆಯ ಮೊದಲ ಹಂತವು ಅಕ್ಟೋಬರ್ 27 ರಿಂದ ಡಿಸೆಂಬರ್ 4 ರವರೆಗೆ ನಡೆಯಲಿದೆ. ಕರಡು ಮತದಾರರ ಪಟ್ಟಿಯನ್ನು ಡಿಸೆಂಬರ್ 9 ರಂದು ಪ್ರಕಟಿಸಲಾಗುವುದು. ಅಂತಿಮ ಮತದಾರರ ಪಟ್ಟಿಯನ್ನು ಫೆಬ್ರವರಿ 7, 2026 ರಂದು ಪ್ರಕಟಿಸಲಾಗುವುದು ಎಂದು ಮುಖ್ಯ ಚುನಾವಣಾಧಿಕಾರಿ ಮನೋಜ್ ಅಗರ್ವಾಲ್ ತಿಳಿಸಿದ್ದಾರೆ.

ರೈತರು ಸಮಗ್ರ ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ: ಎಆರ್‌ಕೆ

ಚಾಮರಾಜನಗರ, ಈ ದೇಶದ ಬೆನ್ನೆಲುಬು ಆಗಿರುವ ರೈತರು ಕೃಷಿ ಕ್ಷೇತ್ರದಲ್ಲಿ ಸ್ವಾವಲಂಬಿಗಳಾಗಲು ಸಮಗ್ರ ವೈಜ್ಞಾನಿಕ ಕೃಷಿ ಪದ್ಧತಿ ಹಾಗೂ ಸಾವಯವ ಕೃಷಿ ಅಳವಡಿಸಿಕೊಳ್ಳುವಂತೆ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಸಲಹೆ ಮಾಡಿದರು.

ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಹಮ್ಮಿಕೊಳ್ಳಲಾಗಿದ್ದ ರೈತ ದಸರಾ ಕಾರ್ಯಕ್ರಮದ ವೇದಿಕೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅನ್ನದಾತರ ಶ್ರಮಕ್ಕೆ ಬೆಲೆ ಕಟ್ಟಕಟ್ಟಲು ಸಾಧ್ಯವೇ ಇಲ್ಲ, ಈ ನಿಟ್ಟಿನಲ್ಲಿ ರೈತ ಸಾಧಕರನ್ನು ಗೌರವಿಸುವುದು ಹಾಗೂ ದೇಶಿ ತಳಿಗಳನ್ನು ಜನರಿಗೆ ಪರಿಚಯಿಸುವುದು, ರೈತರಿಗೆ ಸಮಗ್ರ ಬೇಸಾಯದ ಕುರಿತು ಜಾಗೃತಿ ಮೂಡಿಸುವುದು ರೈತ ದಸರಾದ ಪ್ರಮುಖ ಉದ್ದೇಶವಾಗಿದೆ. ಜಿಲ್ಲೆಯಲ್ಲಿ ಮಳೆಯಾದರೆ ಮಾತ್ರ ಬೆಳೆ ಎನ್ನುವ ಪರಿಸ್ಥಿತಿ ಇದೆ. ರೈತರು ಇಂದು ಸಂಕಷ್ಟದಲ್ಲಿದ್ದಾರೆ. ಸರ್ಕಾರ ರೈತರ ಪರವಾಗಿದ್ದು, ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಸೇರಿದಂತೆ ಜಿಲ್ಲೆಯ ರೈತರ ಅಭಿವೃದ್ಧಿಗೆ ಸಾಕಷ್ಟು ನೀರಾವರಿ ಯೋಜನೆಗಳು ಅಗತ್ಯವಾಗಿವೆ. ಇದರಿಂದ ರೈತರ ಬದುಕು ಹಸನಾಗಲಿದೆ ಎಂದರು.

ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿ ರೈತರ ದಸರಾ ಆಚರಣೆ ಮೂಲಕ ಜಿಲ್ಲೆಯ ರೈತ ಬಾಂಧವರಿಗೆ ಶಕ್ತಿ ತುಂಬುವ ಕೆಲಸವನ್ನು ಸರ್ಕಾರ ಮಾಡುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಹೈನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ರೈತರಿಗೆ ಕೃಷಿಯಲ್ಲಿ ಪರಿಣತಿ ಹೊಂದಲು ಹೆಚ್ಚಿನ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ ಹೈನುಗಾರಿಕೆ ಹಾಗೂ ಶ್ವಾನ ಪ್ರದರ್ಶನಕ್ಕೆ ಪ್ರೋತ್ಸಾಹ ನೀಡುವ ಮೂಲಕ ಸರ್ಕಾರವು ರೈತರ ಬಗ್ಗೆ ಕಾಳಜಿ ಹೊಂದಿದೆ ಎಂಬುದನ್ನು ಸಾಬೀತುಪಡಿಸಿದೆ. ಎಂದರು.

ರೈತ ಮುಖಂಡರಾದ ಹೊನ್ನೂರು ಬಸವಣ್ಣ ಹಾಗೂ ಕೊತ್ತನೂರು ಷಣ್ಮುಗಸ್ವಾಮಿ ಅವರು ಕಾರ್ಯಕ್ರಮದಲ್ಲಿ ರೈತರ ಸಮಸ್ಯೆಗಳು, ಪರಿಹಾರೋಪಾಯಗಳು ಹಾಗೂ ನೀರಾವರಿ ಯೋಜನೆಗಳ ಅಗತ್ಯ, ಜಿಲ್ಲೆಯಲ್ಲಿ ಮಾನವ-ಪ್ರಾಣಿ ಸಂಘರ್ಷ ಕುರಿತು ಮಾತನಾಡಿದರು.

ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು, ಚುಡಾ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಹೆಚ್ಚುವರಿ ಜಿಲ್ಲಾಧಿಕಾರಿ ವಿ. ಪ್ರಿಯದರ್ಶಿನಿ, ಜಂಟಿ ಕೃಷಿ ನಿರ್ದೇಶಕರಾದ ಭಾನು ಪ್ರಕಾಶ್, ರೈತ ಮುಖಂಡರಾದ ಮಾಡ್ರಹಳ್ಳಿ ಪಾಪಣ್ಣ, ಮಹಿಮಾ ಪ್ರಸಾದ್, ಶೈಲೇಂದ್ರ, ಕೊಡಸೋಗೆ ಮಹದೇವಸ್ವಾಮಿ, ಮಂಜುಳ, ಶಾಂತಪ್ಪ, ರಾಜೇಂದ್ರ, ರವಿ, ಶಿವಮೂರ್ತಿ, ನಾಗಪ್ಪ, ಚಿಕ್ಕಸ್ವಾಮಿ ಕೃಷಿಕ ತಾಲೂಕು ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ರೈತ ದಸರಾ ಅಂಗವಾಗಿ ಡಾ. ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ ಏರ್ಪಡಿಸಲಾಗಿದ್ದ ಕೃಷಿ ಯಂತ್ರೋಪಕರಣಗಳು ಹಾಗೂ ವಿವಿಧ ತಳಿಯ ಹಸು ಕರುಗಳು, ಕುರಿ ಮೇಕೆಗಳ ವಿವಿಧ ಮಳಿಗೆಗಳನ್ನು ಗಣ್ಯರು ಉದ್ಘಾಟಿಸಿದರು.

ಧರ್ಮ ಉಳಿಯಲು ಧಾರ್ಮಿಕ ಗುರುಗಳು ಆಶೀರ್ವದಿಸಬೇಕು

ಚಿಕ್ಕಬಳ್ಳಾಪುರ: ಧರ್ಮದಲ್ಲಿ ರಾಜಕಾರಣ ಬೆರೆಯಬಾರದು; ಆದರೆ ರಾಜಕಾರಣದಲ್ಲಿ ಧರ್ಮ ಮತ್ತು ಮೌಲ್ಯಗಳು ಉಳಿಯುವಂತಾಗಲು ಧಾರ್ಮಿಕ ಗುರುಗಳು ರಾಜಕಾರಣಿಗಳಿಗೆ ಆಶೀರ್ವಾದ ನೀಡಿ, ಮಾರ್ಗದರ್ಶನ ಮಾಡಬೇಕು ಎಂದು ನೊಣವಿನಕೆರೆಯ ಕಾಡಸಿದ್ದೇಶ್ವರ ಮಠದ ಶ್ರೀ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಹೇಳಿದರು.

ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ನಡೆಯುತ್ತಿರುವ ನವರಾತ್ರಿ ಉತ್ಸವದ ಏಳನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕೀಯ ದಲ್ಲಿ ಧರ್ಮ ಉಳಿಯಬೇಕು ಎಂಬುದು ಭಗವಾನ್ ಶ್ರೀ ಸತ್ಯ ಸಾಯಿ

ಮೈಸೂರಿನಿಂದ ಹೋಗುವಾಗ ದಾರಿ ತಪ್ಪಿ ಹಳ್ಳಕ್ಕಿಳಿದ ಟೆಕ್ಕಿಗಳ ಕಾರು



ಚಾಮರಾಜನಗರ: ಮೈಸೂರು ದಸರಾ ಮುಗಿಸಿ ಚೆನ್ನೈನತ್ತ ತೆರಳುತ್ತಿದ್ದ ಟೆಕ್ಕಿಗಳ ಕಾರೊಂದು ಹಳ್ಳಕ್ಕೆ ಇಳಿದ ಘಟನೆ ಬೆಂಗಳೂರು-ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿ ಹಾದುಹೋಗುವ ಚಾಮರಾಜನಗರ ಸಮೀಪದ ಆಸನೂರು ಅರಣ್ಯ ರಸ್ತೆಯಲ್ಲಿ ನಡೆದಿದೆ.ಬೆಂಗಳೂರಿನಲ್ಲಿ ಕೆಲಸ ಮಾಡುವ ಟೆಕ್ಕಿಗಳಾದ ತಮಿಳುನಾಡು ಮೂಲದ ರೋಜರ್? ಪ್ರಿನ್ಸ್?, ಪ್ರಿನ್ಸ್ ಮಾರ್ಟಿನ್, ಮಣಿ, ಅರಿವುಮತಿ, ಗುಣ, ಸರಾಮಿ, ಭೂಪೇಶ್, ತ್ರಿಶಾ, ಜೋಷಿಯಾ ಕಾರಿನಲ್ಲಿದ್ದ ಪ್ರಯಾಣಿಕರು. ವೀಕೆಂಡ್ ಹಿನ್ನೆಲೆ ನಿನ್ನೆ ರಾತ್ರಿ ಮೈಸೂರಿಗೆ ಬಂದು ದಸರಾ ಕಣ್ತುಂಬಿಕೊಂಡಿದ್ದಾರೆ. ಬಳಿಕ, ಚೆನ್ನೈಗೆ ತೆರಳುತ್ತಿದ್ದಾಗ ದಾರಿ ತಪ್ಪಿ ದಿಂಬಂ ಮುಖ್ಯರಸ್ತೆಯಿಂದ ಅರಣ್ಯ ಹಾದಿಗೆ ಹೋಗಿದ್ದಾರೆ. ಬಳಿಕ, ತಿರುವಿನಲ್ಲಿ ಕಾರು ಹಳ್ಳಕ್ಕೆ ಇಳಿದಿದೆ ಎಂದು ಟೆಕ್ಕಿಗಳು ತಿಳಿಸಿದ್ದಾರೆ. ಅದೃಷ್ಟವಶಾತ್?? ಎಲ್ಲರೂ ಪಾರಾಗಿದ್ದಾರೆ.ದಾರಿ ತಪ್ಪಿ ಹಳ್ಳಕ್ಕಿಳಿದ ಟೆಕ್ಕಿಗಳ ಕಾರು ಕಾರಿನ ಸುತ್ತಮುತ್ತಲೇ ಕಾಡಾನೆ ಓಡಾಟ: ಆಸನೂರು ಅರಣ್ಯ ಹಾದುಹೋಗುವ ಊರಾಗಿದ್ದು, ತಮಿಳುನಾಡಿನ ಸತ್ಯಮಂಗಲಂ ಹುಲಿ ರಕ್ಷಿತಾರಣ್ಯಕ್ಕೆ ಒಳಪಡಲಿದೆ. ಕಾರು ಹಳ್ಳಕ್ಕಿಳಿದ ಬಳಿಕ ಇವರು ಏನಾಯಿತೆಂದು ನೋಡುವಷ್ಟರಲ್ಲಿ ಕಾಡಾನೆಗಳ ಶಬ್ದ ಕೇಳಿಸಿದೆ. ತಕ್ಷಣ ಚೆನ್ನೈನ ಅಗ್ನಿಶಾಮಕ ದಳವನ್ನು ಸಂಪರ್ಕಿಸಿದ ಟೆಕ್ಕಿಗಳು, ಸಹಾಯಕ್ಕೆ ಮೊರೆ ಇಟ್ಟಿದ್ದಾರೆ. ಚೆನ್ನೈ ಅಧಿಕಾರಿಗಳ ನಿರ್ದೇಶನದಂತೆ ಆಸನೂರು ಅಗ್ನಿಶಾಮಕ ಠಾಣಾಧಿಕಾರಿ ಬಾಲಮುರುಳಿ ನೇತೃತ್ವದ ತಂಡ ಸ್ಥಳಕ್ಕೆ ದೌಡಾಯಿಸಿ, ಆನೆಗಳು ದೂರಕ್ಕೆ ತೆರಳುವ ತನಕ ಕಾದು ಬಳಿಕ ಎಲ್ಲರನ್ನೂ ರಕ್ಷಿಸಿ ಮೇಲಕ್ಕೆ ಕರೆತಂದಿದ್ದಾರೆ.

ಹಾಸನೂರು ಅಗ್ನಿಶಾಮಕ ದಳದಿಂದ ಟೆಕ್ಕಿಗಳ ರಕ್ಷಣೆ

ಸುಮಾರು ಐದು ಆನೆಗಳು ಅಗ್ನಿಶಾಮಕ ವಾಹನಗಳನ್ನು ಸುತ್ತುವರೆದಿದ್ದರಿಂದ ರಕ್ಷಣೆ ಸವಾಲಾಗಿತ್ತು. ಟ್ರಾಕ್ಟರ್?ಗಳ ಸಹಾಯದಿಂದ ಕಾರನ್ನು ಮೇಲಕ್ಕೆ ಎತ್ತಲಾಯಿತು. ಅರಣ್ಯದ ಕಡಿದಾದ ದಾರಿಯಲ್ಲಿ ಅವರು ಸಾಗಿ, ಬಳಿಕ ಹಳ್ಳದಲ್ಲಿ ಸಿಲುಕಿದ್ದರು ಎಂದು ಠಾಣಾಧಿಕಾರಿ ಬಾಲಮುರುಳಿ ಮಾಹಿತಿ ನೀಡಿದ್ದಾರೆ.

ರೈತ ದಸರಾದಲ್ಲಿ ನೀರು, ಮೇವು ಸಮಿತಿ ವಿಫಲ

ರೊಚ್ಚಿಗೆದ್ದ ರೈತರಿಂದ ಪ್ರತಿಭಟನೆ

ಮೈಸೂರು : ರೈತ ದಸರಾದಲ್ಲಿ ಹಳ್ಳಿಕಾರ್ ಎತ್ತುಗಳಿಗೆ ಕುಡಿಯಲು ಉತ್ತಮವಾದ ನೀರು ಮತ್ತು ಮೇವು ಒದಗಿಸಿಲ್ಲ, 12 ಗಂಟೆಯಾದರೂ ರೈತರಿಗೆ ಉಪಹಾರ ನೀಡಿಲ್ಲ, ರೈತರನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿ ನೂರಾರು ರೈತರು ಶನಿವಾರ ಕುಕ್ಕರಹಳ್ಳಿ ಕೆರೆ ಪಕ್ಕದ ಕಾಂತರಾಜ ಅರಸು ರಸ್ತೆ ವೃತ್ತದಲ್ಲಿ ಒಂದು ಗಂಟೆಗೂ ಹೆಚ್ಚುಕಾಲ ದಿಢೀರ್ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರಲ್ಲದೇ, ದಸರಾ ಉಪ ಸಮಿತಿ ಮತ್ತು ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು, ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಸುಮಾರು 60 ಜೊತೆ ಹಳ್ಳಿಕಾರ್ ಎತ್ತುಗಳೊಂದಿಗೆ ಆಗಮಿಸಿದ ನೂರಾರು ರೈತರು ದಸರಾ ಉಪ ಸಮಿತಿಯ ನಿರ್ಲಕ್ಷ್ಯ ಮತ್ತು ಅವ್ಯವಸ್ಥೆಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತಸಂಘದ ಅಧ್ಯಕ್ಷರಾದ ಇಂಗಲಗುಪ್ಪೆ ಕೃಷ್ಣೇಗೌಡ ಮಾತನಾಡಿ, ವಿಶ್ವ ವಿಖ್ಯಾತ ಮೈಸೂರು ದಸರಾದಲ್ಲಿ ನಡೆಯುವ ರೈತ ದಸರಾದಲ್ಲಿ ಹಳ್ಳಿಕಾರ್ ಎತ್ತುಗಳ ಪ್ರದರ್ಶನಕ್ಕೆ ಕರೆಸಲಾಗಿತ್ತು, ಆದರೇ, ರೈತರು ಮಕ್ಕಳಂತೆ ಜೋಪಾನ ಮಾಡಿ ಸಾಕುವ ಎತ್ತುಗಳಿಗೆ ಕನಿಷ್ಠ ಉತ್ತಮವಾದ ಕುಡಿಯುವ ನೀರು ಒದಗಿಸಿಲ್ಲ, ಕಲುಷಿತ ನೀರು ಕೊಡಲಾಗುತ್ತಿದೆ. ಉತ್ತಮವಾದ ಮೇವು ನೀಡಿಲ್ಲ, ಶುಕ್ರವಾರ ರಾತ್ರಿ ನಾವು ರಾಸುಗಳಿಂದ ಬಂದಿರುವ ರೈತರಿಗೆ ಇಲ್ಲಿಯ ತನಕ ಉಪಹಾರವನ್ನೂ ಒದಗಿಸಿಲ್ಲ, ಈ ಸರ್ಕಾರ ಮತ್ತು ಜಿಲ್ಲಾಡಳಿತ, ದಸರಾ ಸಮಿತಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕೇವಲ ಮನರಂಜನೆ ನೀಡುವ ಕಂಬಳಕ್ಕೆ ಆದ್ಯತೆ ನೀಡುತ್ತಿದೆ ಆದರೇ, ಲೋಕಕ್ಕೆ ಅನ್ನ ನೀಡುವ ನಿಜವಾದ ರೈತರಿಗೆ ಯಾವುದೇ ಸೌಲಭ್ಯ ಒದಗಿಸಿಲ್ಲ, ರೈತರು ಹಳ್ಳಿಕಾರ್ ಎತ್ತುಗಳನ್ನು ಮಕ್ಕಳಂತೆ ಸಾಕುತ್ತಾರೆ. ಆದರೇ ಅವುಗಳಿಗೆ ಉತ್ತಮವಾದ ನೀರನ್ನೂ ಸಹ ಈ ಸಮಿತಿಯವರು ಒದಗಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸ್ಥಳಕ್ಕೆ ಡಿಸಿಪಿ ಸುಂದರರಾಜು ಆಗಮಿಸಿ ರೈತರ ಮನವೊಲಿಕೆಗೆ ನಡೆಸಿದ ಪ್ರಯತ್ನ ವಿಫಲವಾಯಿತು. ಒಬ್ಬ ಶಾಸಕ ಬಂದ್ರೆ ನೀವು ಮತ್ತು ಅಧಿಕಾರಿಗಳು ಕೈಕಟ್ಟಿ ನಿಲ್ಲುತ್ತೀರಿ, ರೈತರನ್ನು ದಸರಾಕ್ಕೆ ಕರೆಸಿ ಅವರಿಗೆ ಅವಮಾನ ಮಾಡಿರುವ ಜಿಲ್ಲಾಡಳಿತ ಸ್ಥಳಕ್ಕೆ ಬರುವ ತನಕ ನಾವು ಎದ್ದೇಳಲ್ಲ ಎಂದು ರೈತರು ಬಿಗಿಪಟ್ಟು ಹಿಡಿದು ಘೋಷಣೆ ಕೂಗಿದರು, ಈ ವೇಳೆ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು, ಪೊಲೀಸರ ವಿರುದ್ಧವೂ ರೈತರು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು. ಕರ್ನಾಟಕ ರಾಜ್ಯ ರೈತಸಂಘದ ಮಂಡ್ಯ ಜಿಲ್ಲಾಧ್ಯಕ್ಷ ಚಿನಕುರಳಿ ಸಿ.ಎಸ್.ಸೋಮೇಗೌಡ, ಬೇವಿನಕುಪ್ಪೆ ಅನೀಲ್ ಇತರರು ಇದ್ದರು.

ಎಚ್?ವಿಪಿ ಲಸಿಕೆ ಪಡೆಯಲು ಅವಧಿ ವಿಸ್ತರಣೆ

ರಾಮನಗರ: ರಾಜ್ಯದಲ್ಲಿ 14 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಒಂದು ಡೋಸ್ ಎಚ್?ಪಿವಿ ಲಸಿಕೆ (Gardasil-4) ನೀಡುವ ಉದ್ದೇಶದಿಂದ Human Papilloma Virus (HPV) ಲಸಿಕಾ ಅಭಿಯಾನವನ್ನು ಪ್ರಾರಂಭಿಸಿ, ಮೂರು ತಿಂಗಳ ಅವಧಿಗೆ ಹಮ್ಮಿಕೊಳ್ಳಲಾಗಿತ್ತು. ನಂತರ ಈ ಅಭಿಯಾನವನ್ನು ಮುಂದಿನ ಮೂರು ತಿಂಗಳ ಅವಧಿಗೆ, ಅಂದರೆ ಆಗಸ್ಟ್ 31 ರವರೆಗೆ ವಿಸ್ತರಿಸಲಾಗಿತ್ತು. ಇದುವರೆಗೆ ರಾಜ್ಯದಲ್ಲಿ ಒಟ್ಟು 4,34,382 ಫಲಾನುಭವಿಗಳಿಗೆ ಎಚ್?ಪಿವಿ ಲಸಿಕೆ ನೀಡಲಾಗಿದ್ದು, ಶೇ.85% ರಷ್ಟು ಗುರಿಯನ್ನು ಸಾಧಿಸಲಾಗಿದೆ. ಈ ಲಸಿಕಾ ಅಭಿಯಾನವನ್ನು ಯಶಸ್ವಿಗೊಳಿಸಲು ಎಚ್?ಪಿವಿ ಲಸಿಕೆಯನ್ನು ಪಡೆಯದೆ ಉಳಿದಿರುವ ಅರ್ಹ 14 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಮತ್ತೊಂದು ಅವಕಾಶವನ್ನು ಒದಗಿಸುವ ಉದ್ದೇಶದಿಂದ ಈ ಲಸಿಕಾ ಅಭಿಯಾನವನ್ನು ಡಿಸೆಂಬರ್ 31 ರವರೆಗೆ ಮತ್ತೊಮ್ಮೆ ವಿಸ್ತರಿಸಲಾಗಿದೆ. ಆದ್ದರಿಂದ, ರಾಜ್ಯದಲ್ಲಿ ಎಚ್?ಪಿವಿ ಲಸಿಕಾ ಅಭಿಯಾನದಡಿ ಲಸಿಕೆಯನ್ನು ಪಡೆಯದೆ ಉಳಿದಿರುವ ಎಲ್ಲಾ ಅರ್ಹ 14 ರಿಂದ 15 ವರ್ಷದೊಳಗಿನ ಹೆಣ್ಣುಮಕ್ಕಳು ಸ್ವಯಂ ಪ್ರೇರಿತವಾಗಿ ಬಂದು ಲಸಿಕೆಯನ್ನು ಡಿಸೆಂಬರ್ 31ರೊಳಗೆ ಪಡೆಯುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಆರ್.ಸಿ.ಎಚ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜನಗರ ದಸರಾ ಮಹೋತ್ಸವ

ವಿವಿಧ ಕಾರ್ಯಕ್ರಮಗಳಿಗೆ ಸಚಿವ ಸಿ.ಪುಟ್ಟರಂಗಶೆಟ್ಟಿ ಚಾಲನೆ । ರೈತ ದಸರಾ, ಫಲಪುಷ್ಪ ಪ್ರದರ್ಶನ, ಶ್ವಾನಗಳ ಪ್ರದರ್ಶನ, ಹಾಲು ಕರೆಯುವ ಸ್ಪರ್ಧೆ,ಹೆಲಿ ರೈಡ್‌ಗೆ ಚಾಲನೆ

ಚಾಮರಾಜನಗರ: ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ಜನಾಕರ್ಷಣೆಗಾಗಿ ಆಯೋಜಿಸಲಾಗಿರುವ ವಿವಿಧ ಕಾರ್ಯಕ್ರಮಗಳಿಗೆ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ನಗರದಲ್ಲಿ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳ ವತಿಯಿಂದ ಆಯೋಜಿಸಲಾಗಿರುವ ರೈತ ದಸರಾ, ಫಲ ಪುಷ್ಪ ಪ್ರದರ್ಶನ, ಶ್ವಾನಗಳ ಪ್ರದರ್ಶನ, ಹಾಲು ಕರೆಯುವ ಸ್ಪರ್ಧೆ ಮತ್ತು ಹೆಲಿ ರೈಡ್ ಕಾರ್ಯಕ್ರಮಗಳನ್ನು ಸಚಿವರು ಉದ್ಘಾಟಿಸಿದರು.

ಹೈನುಗಾರಿಕೆಗೆ ಸರ್ಕಾರದಿಂದ ಹೆಚ್ಚಿನ ಪ್ರೋತ್ಸಾಹ

ರೈತ ದಸರಾ ಅಂಗವಾಗಿ ಪಶುಪಾಲನಾ ಇಲಾಖೆ ಹಾಗೂ ಚಾಮರಾಜನಗರ ಹಾಲು ಒಕ್ಕೂಟದ ಸಹಯೋಗದಲ್ಲಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಪಕ್ಕದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದ ಹಾಲು ಕರೆಯುವ ಸ್ಪರ್ಧೆ ಹಾಗೂ ಶ್ವಾನಗಳ ಪ್ರದರ್ಶನ ಕಾರ್ಯಕ್ರಮವನ್ನು ಸಚಿವ ಸಿ. ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮೈಸೂರು ದಸರಾ ಮಹೋತ್ಸವದ ಭಾಗವಾಗಿ ಚಾಮರಾಜನಗರದಲ್ಲಿಯೂ ಮೂರು ದಿನಗಳ ಕಾಲ ಜಿಲ್ಲಾ ದಸರಾ ಉತ್ಸವವನ್ನು ಆಯೋಜಿಸಲಾಗುತ್ತಿದೆ. ನಾವೆಲ್ಲರೂ ರೈತರು, ರೈತರ ಮಕ್ಕಳು ಹಾಗೂ ವ್ಯವಸಾಯವನ್ನೇ ನಂಬಿ ಬದುಕುವವರು. ಚಾಮರಾಜನಗರ ಜಿಲ್ಲೆ ವಿಶೇಷ ಹಾಗೂ ವಿಭಿನ್ನ ಮಣ್ಣಿನ ಗುಣಲಕ್ಷಣಗಳನ್ನು ಹೊಂದಿದೆ. ರೈತರನ್ನು ಉತ್ತೇಜಿಸಲು ಸರ್ಕಾರ ಹೈನುಗಾರಿಕೆಗೆ ಪ್ರೋತ್ಸಾಹ ನೀಡುತ್ತಿದೆ ಎಂದರು.

ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿ, ನಾಡಹಬ್ಬ ದಸರಾ ಮಹೋತ್ಸವ ಮೈಸೂರಿನ ಪರಂಪರೆಯಾಗಿದೆ. ಅದನ್ನು ಚಾಮರಾಜನಗರದಲ್ಲಿಯೂ ಮುಂದುವರಿಸುವ ಮೂಲಕ ಈ ಬಾರಿಯ ದಸರಾ ಉತ್ಸವವನ್ನು ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ಹಾಲು ಕರೆಯುವ ಸ್ಪರ್ಧೆ ಹಾಗೂ ಶ್ವಾನಗಳ ಪ್ರದರ್ಶನದ ಮೂಲಕ ಹೈನುಗಾರಿಕೆಯನ್ನು ಉತ್ತೇಜಿಸಲಾಗುತ್ತಿದೆ. ಇದು ದೇಶಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಶ್ವಾನದಳದಿಂದ ಅರಣ್ಯ ಅಪರಾಧ ಪ್ರಕರಣಗಳನ್ನು ಪತ್ತೆಹಚ್ಚುವ ಕುರಿತು ಪ್ರಾತ್ಯಕ್ಷಿಕೆ ನಡೆಯಿತು.

ಅಲಂಕೃತ ಎತ್ತಿನಗಾಡಿಗಳ ಮೆರವಣಿಗೆ

ರೈತ ದಸರಾ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಡಾ. ಬಿ.ಆರ್. ಅಂಬೇಡ್ಕರ್ ಭವನದವರೆಗೆ ಡೊಳ್ಳು ಕುಣಿತ, ಮರಗಾಲು ಕುಣಿತ, ಚಂಡೆವಾದ್ಯ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಆಯೋಜಿಸಲಾಗಿದ್ದ ಅಲಂಕೃತ ಎತ್ತಿನಗಾಡಿಗಳ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವರು ಚಾಲನೆ ನೀಡಿದರು. ನಂತರ ಜಿಲ್ಲಾಡಳಿತ ಭವನದ ಆವರಣಕ್ಕೆ ಆಗಮಿಸಿದ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಸವೇಶ್ವರರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಫಲಪುಷ್ಪ ಪ್ರದರ್ಶನದ ಅಂಗವಾಗಿ ಜಿಲ್ಲಾಡಳಿತ ಭವನದ ಆವರಣದಲ್ಲಿ ನಿರ್ಮಿಸಲಾಗಿದ್ದ ಚಾಮುಂಡಿ ತಾಯಿಯ ಮಣ್ಣಿನ ಕಲಾಕೃತಿಯನ್ನು ವೀಕ್ಷಿಸಿದರು. ಬಳಿಕ ಜಿಲ್ಲಾಡಳಿತ ಭವನದ ಪ್ರವೇಶದ್ವಾರದ ಒಳಾವರಣದಲ್ಲಿ ರಾಶಿ ಪೂಜೆ ನೆರವೇರಿಸುವ ಮೂಲಕ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ವಿ. ಪ್ರಿಯ ದರ್ಶಿನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶ್ವಾನಗಳು ನಿಯತ್ತು, ಪ್ರಾಮಾಣಿಕತೆಯ ಸಂಕೇತ

ಶ್ವಾನಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು, ನಿಯತ್ತು ಹಾಗೂ ಪ್ರಾಮಾಣಿಕತೆಗೆ ಮತ್ತೊಂದು ಹೆಸರೇ ಶ್ವಾನಗಳು. ನಾಯಿ ಬಹಳ ಸೂಕ್ಷ್ಮ ಪ್ರಾಣಿಯಾಗಿದ್ದು, ಮನುಷ್ಯನ ಕಣ್ಣಿಗೆ ಕಾಣದ ಸಂಗತಿಗಳು ನಾಯಿಯ ಗಮನಕ್ಕೆ ಬರುತ್ತವೆ. ಹವಾಮಾನ ವೈಪರೀತ್ಯಗಳನ್ನೂ ನಾಯಿಗಳು ಸೂಕ್ಷ್ಮವಾಗಿ ಗ್ರಹಿಸಬಲ್ಲವು ಎಂದು ಹೇಳಿದರು. ನಾಯಿ ಸಾಕುವವರು ಜವಾಬ್ದಾರಿಯಿಂದ ವರ್ತಿಸಬೇಕು. ನಾಯಿಗಳಿಂದ ಮಕ್ಕಳಿಗೆ ಅಪಾಯ ಎದುರಾಗದಂತೆ ಎಚ್ಚರಿಕೆ ವಹಿಸಬೇಕು. ರೇಬಿಸ್ ನಿಯಂತ್ರಣದ ಕುರಿತು ಜನರಲ್ಲಿ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ಶ್ವಾನಗಳ ಪ್ರದರ್ಶನ ಆಯೋಜಿಸಲಾಗಿದೆ ಎಂದರು.

ಹೆಲಿ ರೈಡ್ ಮೂಲಕ ಹೆಲಿ ಟೂರಿಸಂಗೆ ಪ್ರೋತ್ಸಾಹ

ದಸರಾ ಪ್ರಯುಕ್ತ ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಇದೇ ಮೊದಲ ಬಾರಿಗೆ ಆಯೋಜಿಸಲಾಗಿರುವ ಹೆಲಿ ರೈಡ್‌ನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಸ್ವತಃ ಭಾಗವಹಿಸುವ ಮೂಲಕ ಹೆಲಿ ಟೂರಿಸಂಗೆ ಪ್ರೋತ್ಸಾಹ ನೀಡಿದರು. ಸಚಿವರೊಂದಿಗೆ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಹೆಲಿ ರೈಡ್‌ನಲ್ಲಿ ಪಾಲ್ಗೊಂಡು ಜಿಲ್ಲೆಯ ಸುತ್ತ ಒಂದು ಸುತ್ತು ಹಾರಾಟ ನಡೆಸಿ ಸಂಭ್ರಮಿಸಿದರು.

ಚಾಮರಾಜನಗರ ದಸರಾ

ಕಲ್ಲಂಗಡಿಯಲ್ಲಿ ಅರಳಿದ ಸಿಎಂ-ಡಿಸಿಎಂ; ಗಮನ ಸೆಳೆದ ಡಾಗ್ ಶೋ, ಹೆಲಿ ರೈಡ್

ಚಾಮರಾಜನಗರ: ಅಕ್ಟೋಬರ್? 17ರಿಂದ ಚಾಮರಾಜನಗರ ದಸರಾ-2026ಕ್ಕೆ ಚಾಲನೆ ಸಿಗಲಿದ್ದು, ಇದರ ಪ್ರಯುಕ್ತವಾಗಿ ಶುಕ್ರವಾರ ನಡೆದ ವೈವಿಧ್ಯಮಯ ಕಾರ್ಯಕ್ರಮಗಳು ಜನರ ಮನಸೂರೆಗೊಂಡವು.

ದಸರಾ ಪ್ರಯುಕ್ತ ನಗರದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಶ್ವಾನ ಪ್ರದರ್ಶನ ನಡೆಯಿತು. ಪ್ರದರ್ಶನದಲ್ಲಿ ಪಿಟ್ ಬುಲ್, ಹಸ್ಕಿ, ಗ್ರೇಟ್ ಡೇನ್, ಡಾಬರ್ ಮನ್, ಬೆಲ್ಜಿಯಂ ಸ್ನೀಪರ್ಡ್, ಸೇಂಟ್ ಬರ್ನಾರ್ಡ್, ಜರ್ಮನ್ ಶೆಫರ್ಡ್ ಸೇರಿದಂತೆ 19 ತಳಿಗಳ 50ಕ್ಕೂ ಅಧಿಕ ಶ್ವಾನಗಳು ಭಾಗಿಯಾಗಿದ್ದವು. ಪ್ರದರ್ಶನದಲ್ಲಿ ಅರಣ್ಯ ಇಲಾಖೆಯ ಬೆಲ್ಜಿಯಂ ಸ್ನೀಫರ್ ಶ್ವಾನಗಳು ಅಪರಾಧ ಪತ್ತೆ ಅಣಕು ಪ್ರದರ್ಶನ ನೀಡುವ ಮೂಲಕ ಎಲ್ಲರನ್ನೂ ಬೆರಗುಗೊಳಿಸಿದವು.

ಬೆಕ್ಕಿನ ಗಾತ್ರದ ಶ್ವಾನದಿಂದ ಗಜಗಾತ್ರದ ಶ್ವಾನಗಳು, ಮುದ್ದು ಮುದ್ದಾಗಿದ್ದ ನಾಯಿಮರಿಗಳು, ನೋಟದಿಂದಲೇ ಬೆದರಿಬೆದರಿಸುವಂತಿದ್ದ ತರಬೇತಿ ಪಡೆದ ಶ್ವಾನಗಳನ್ನು ಕಂಡು ಜನರು ಮುದಗೊಂಡರು.

ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಶ್ವಾನ ಪ್ರದರ್ಶನಕ್ಕೆ ಚಾಲನೆ ನೀಡಿ ಶ್ವಾನಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಲ್ಲಂಗಡಿಯಲ್ಲಿ ಅರಳಿದ ಸಿಎಂ- ಡಿಸಿಎಂ: ಚಾಮರಾಜನಗರ ದಸರಾ ಪ್ರಯುಕ್ತ ನಗರದ ಜಿಲ್ಲಾಡಳಿತ ಭವನದಲ್ಲಿ ಫಲಪುಷ್ಪ ಪ್ರದರ್ಶನ ಕೂಡ ಆಯೋಜನೆ ಮಾಡಲಾಗಿತ್ತು. ಕಲ್ಲಂಗಡಿ ಹಣ್ಣಿನಲ್ಲಿ ಗಣ್ಯರು ಅರಳಿದ್ದು ಗಮನ ಸೆಳೆಯಿತು.

ಕಲ್ಲಂಗಡಿ ಯಲ್ಲಿ ಅರಳದ ಕಲಾಕೃತಿಗಳು

ಡಾ.ಬಿ.ಆರ್.ಅಂಬೇಡ್ಕರ್, ಜ್ಞಾನಪೀಠ ಪುರಸ್ಕೃತರು, ಡಾ.ರಾಜ್, ಡಾ.ವಿಷ್ಣುವರ್ಧನ್, ಸಿಎಂ ಡಿ.ಕೆ.ಶಿವಕುಮಾರ್, ಡಿಸಿಎಂ ಪರಮೇಶ್ವರ್ ಸೇರಿದಂತೆ ಗಣ್ಯರನ್ನು ಕಲ್ಲಂಗಡಿ ಹಣ್ಣಿನಲ್ಲಿ ಚಿತ್ರೀಕರಿಸಲಾಗಿತ್ತು. ಚಾಮರಾಜನಗರ ಜಿಲ್ಲೆಯಲ್ಲಿ ಬೆಳೆಯುವ ವೈವಿಧ್ಯಮಯ ಬೆಳೆ, ಹಣ್ಣುಗಳ ಪ್ರದರ್ಶನ ಕೂಡ ಮಾಡಲಾಗಿದ್ದು ತರಹೇವಾರಿ ಹಣ್ಣುಗ

ಪರಂಪರೆ ಎಂಬುದು ನಮ್ಮ ರಕ್ತದ ಧಮನಿಯಲ್ಲಿ ಇರಲಿ: ಡಾ.ಪಿ. ಶಿವರಾಜು

ಮೈಸೂರು: ನಮ್ಮ ನಾಡಿನ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಪ್ರತಿಯೊಬ್ಬರ ಪಾತ್ರವೂ ಹಿರಿದಾಗಿದ್ದು, ನಮ್ಮ ರಕ್ತದ ಧಮನಿ-ಧಮನಿಗಳಲ್ಲಿ ಪರಂಪರೆ ಇರಬೇಕು ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ಡಾ.ಪಿ. ಶಿವರಾಜು ಹೇಳಿದರು

ರಂಗ ಚಾರ್ಲು ಭವನದ ಆವರಣದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಆಯೋಜಿಸಿದ್ದ ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಿಗಾಗಿ ಪಾರಂಪರಿಕ ಟಾಂಗಾ ಸವಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಾರಂಪರಿಕ ತಾಂಗಾ ಸವಾರಿ ಕಾರ್ಯಕ್ರಮವನ್ನು ಆಯೋಜಿಸಿರುವುದು, ನಮ್ಮ ನಾಡಿನ ಪರಂಪರೆಯನ್ನು ಉಳಿಸಿ ಬೆಳೆಸಲು ಈ ವೇಷಭೂಷಣ ಮುಂದಿನ ಕಾರ್ಯಕ್ರಮಗಳಿಗೆ ಸಹಕಾರಿಯಾಗಲಿವೆ ಎಂದು ತಿಳಿಸಿದರು.

ನಾವು ಆಧುನಿಕ ಉಡುಗೆ-ತೊಡುಗೆಗಳಲ್ಲಿದ್ದರೂ ಇಂತಹ ಸಾಂಪ್ರದಾಯಿಕ ಕಾರ್ಯಕ್ರಮಗಳು ನಮ್ಮ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಜಗತ್ತಿಗೆ ಸಾರಲು ಮುಖ್ಯ ಕಾರಣವಾಗಿವೆ. ಪರಂಪರೆಯನ್ನು ಇಡೀ ವಿಶ್ವದಾದ್ಯಂತ ಪ್ರಸಾರ ಮಾಡಲು ಇಲಾಖೆಯೊಂದಿಗೆ ಸಾರ್ವಜನಿಕರು ಹಾಗೂ ಕನ್ನಡಿಗರ ಸಹಕಾರ ಅತ್ಯಗತ್ಯವಾಗಿದೆ ಎಂದು ಹೇಳಿದರು. ಚಲನಚಿತ್ರ ಖ್ಯಾತ ನಟಿ ಹಾಗೂ ರಂಗಭೂಮಿ ಕಲಾವಿದರಾದ ಅಕ್ಷತಾ ಪಾಂಡವಪುರ ಅವರು ಮಾತನಾಡಿ ಮೈಸೂರಿನಲ್ಲಿ ಸಾಂಪ್ರದಾಯಿಕ ಕಾರ್ಯಕ್ರಮಗಳು ಹಾಗೂ ದಸರಾ ಹಬ್ಬದ ಸಡಗರವು ಕಳೆಗಟ್ಟಿದೆ. ದಂಪತಿಗಳು ಯಾವುದೇ ಮದುವೆ ಅಥವಾ ವಿಶೇಷ ಕಾರ್ಯಕ್ರಮಗಳಿಗೆ ಹೋಗುವ ಮುನ್ನ ಪರಸ್ಪರ ಚರ್ಚಿಸಿ, ಯಾವ ಬಟ್ಟೆ ಧರಿಸಬೇಕು ಎಂಬುದನ್ನು ನಿರ್ಧರಿಸುವ ಅಪರೂಪದ ಕ್ಷಣಗಳು ಇಲ್ಲಿ ಎದ್ದು ಕಾಣುತ್ತಿವೆ. ಮೈಸೂರು ಸಿಲ್ಕ್ ಸೀರೆಗಳು ಮತ್ತು ಸಾಂಪ್ರದಾಯಿಕ ಉಡುಪುಗಳ ಮೇಲಿನ ಒಲವು ಈ ಕಾರ್ಯಕ್ರಮಗಳಲ್ಲಿ ಮತ್ತಷ್ಟು ಮೆರುಗು ತಂದುಕೊಟ್ಟಿದೆ ಎಂದರು.

ಮೈಸೂರಿನ ಜನತೆಗೆ ದಸರಾ ಹಬ್ಬ, ಟಾಂಗಾ ಸವಾರಿ ಮತ್ತು ಇಂತಹ ಸಾಂಪ್ರದಾಯಿಕ ವೇದಿಕೆಗಳು ಅಪರೂಪದ ಖುಷಿಯನ್ನು ನೀಡುತ್ತಿವೆ. ಹಿರಿಯರಿಂದ ಹಿಡಿದು ಎಲ್ಲರೂ ಒಟ್ಟಾಗಿ ಈ ಕಾರ್ಯಕ್ರಮಗಳನ್ನು ಆನಂದಿಸುತ್ತಿದ್ದು, ಮೈಸೂರಿನ ಒಟ್ಟು ಸಂಸ್ಕೃತಿ ಹಾಗೂ ಸಂಪ್ರದಾಯದ ಸೊಗಡು ಮತ್ತಷ್ಟು ಗಟ್ಟಿಯಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮುಖ್ಯಸ್ಥರಾದ ಪಿಳ್ಳೈ ಅಯ್ಯಂಗಾರ್ ಮಾತನಾಡಿ 2008ರಲ್ಲಿ ಯುನೆಸ್ಕೋ ಸಂಸ್ಥೆಯು ವಿಶ್ವದ ಅತ್ಯಂತ ಪ್ರಾಚೀನ ಪದ್ಧತಿಗಳ ಅಮೂರ್ತ ಪರಂಪರೆಯನ್ನು ಗುರುತಿಸಿದ್ದು, ಅದೇ ರೀತಿಯಲ್ಲಿ ಮೈಸೂರು ದಸರಾವನ್ನು ಕೂಡ ಒಂದು ವಿಶ್ವ ಪರಂಪರೆ ಎಂದು ಗುರುತಿಸಬೇಕು ಎಂದು ಹೇಳಿದರು.

ಅರಮನೆ ಹಾಗೂ ಕಟ್ಟಡಗಳಂತಹ ಮೂರ್ತ ಪರಂಪರೆಯ ಜೊತೆಗೆ, ಶತಶತಮಾನಗಳಿಂದ ನಡೆದುಕೊಂಡು ಬಂದಿರುವ ಗೊಂಬೆ ಇಡುವಿಕೆ, ಪರಂಪರಾಗತ ಉಡುಪುಗಳು ಮತ್ತು ಆನೆ ಅಂಬಾರಿ ಉತ್ಸವದಂತಹ ಅಮೂರ್ತ ಪರಂಪರೆಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿದೆ ಎಂದರು. ಕಾರ್ಯಕ್ರಮದಲ್ಲಿ ದಂಪತಿಗಳು ವಿವಿಧ ರೀತಿಯ ಉಡುಪುಗಳನ್ನು ಧರಿಸಿ ಟಾಂಗ ಸವಾರಿ ಹತ್ತುವ ಮೂಲಕ ನಗರದ ವಿವಿಧ ರಸ್ತೆಗಳ ಮೂಲಕ ಸಂಚರಿಸಿ ಪಾರಂಪರಿಕ ಕಟ್ಟಡಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಇಲಾಖೆ ಉಪ ನಿರ್ದೇಶಕರಾದ ಡಾ. ಸಿ.ಎನ್ ಮಂಜುಳಾ ಮತ್ತು ನಿವೃತ್ತ ಉಪನ್ಯಾಸಕರಾದ ರಂಗರಾಜು ಮತ್ತಿತರರು ಉಪಸ್ಥಿತರಿದ್ದರು.

ಓವರ್‌ಲೋಡ್ ಟಿಪ್ಪರ್‌ಗಳ ಕಾಟ

ಗುಂಡ್ಲುಪೇಟೆ: ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯಮ ಮೀರಿ ಅತಿಯಾದ ಭಾರ ಹೊತ್ತು ಸಾಗುವ ಓವರ್ ಲೋಡ್ ಟಿಪ್ಪರ್‌ಗಳ ಸಂಚಾರ ನಿರಂತರವಾಗಿ ನಡೆಯುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿಬಂದಿದೆ.

ನಿಗದಿತ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಲ್ಲು, ಮಣ್ಣು, ಜಲ್ಲಿ ಹಾಗೂ ಇತರೆ ಕಟ್ಟಡ ಸಾಮಗ್ರಿಗಳನ್ನು ತುಂಬಿಕೊಂಡು ಸಂಚರಿಸುವ ಟಿಪ್ಪರ್‌ಗಳಿಂದ ರಸ್ತೆ ಹಾಳಾಗುವುದರ ಜತೆಗೆ ಅಪಘಾತಗಳ ಆತಂಕವೂ ಎದುರಾಗಿದೆ. ಇಂತಹ ವಾಹನಗಳ ಸಂಚಾರದಿಂದ ಸಾರ್ವಜನಿಕರು ಹಾಗೂ ದ್ವಿಚಕ್ರ ವಾಹನ ಸವಾರರು ತೊಂದರೆ ಅನುಭವಿಸುವಂತಾಗಿದೆ.

ವಾಹನಗಳ ಭಾರ ಸಾಗಣೆ ಸಾಮರ್ಥ್ಯ, ಸಂಚಾರ ನಿಯಮಗಳು ಹಾಗೂ ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಸಂಬಂಧಪಟ್ಟ ಅಧಿಕಾರಿಗಳು ಮೌನ ವಹಿಸಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ತಾಲೂಕಿನ ಖನಿಜ ಸಂಪತ್ತು ಬೇರೆ ರಾಜ್ಯಕ್ಕೆ ಹೊಗುತ್ತಿದೆ ಹಾಗೂ ಓವರ್‌ಲೋಡ್ ಟಿಪ್ಪರ್‌ಗಳ ಸಂಚಾರಕ್ಕೆ ಕಡಿವಾಣ ಹಾಕಲು ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ಪರಿಶೀಲನೆ ನಡೆಸಿ, ನಿಯಮ ಉಲ್ಲಂಘಿಸುವ ವಾಹನಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಿ ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ಒತ್ತಾಯಿಸಿದ್ದಾರೆ.

ರಾಜೇಂದ್ರ ಸಾಧಕ ಪ್ರಶಸ್ತಿಗೆ ಆಯ್ಕೆ

ರಾಮನಗರ: ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲಡ್ಕದ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕ ಶ್ರೀರಾಮ ಶಾಲೆ ಕೊಡ ಮಾಡುವ ಕನ್ನಡ ಸಾಧಕ ಪ್ರಶಸ್ತಿಗೆ ತಾಲ್ಲೂಕಿನ ಬಿಳಗುಂಬ ಗ್ರಾಮದ ಪರಿಸರ ಪ್ರೇಮಿ ಬಿ.ಟಿ. ರಾಜೇಂದ್ರ ಭಾಜನರಾಗಿದ್ದಾರೆ.

ನವೆಂಬರ್ 2 ರಂದು ಕಲ್ಲಡ್ಕದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಿ.ಟಿ. ರಾಜೇಂದ್ರ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಬಿ.ಟಿ. ರಾಜೇಂದ್ರ ಕಳೆದ 25 ವರ್ಷಗಳಿಂದ ಕನ್ನಡ ನಾಡು, ನುಡಿ, ಜಲ ಭಾಷೆಗಾಗಿ ದುಡಿಯುತ್ತಿದ್ದು ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ಹಲವು ಸಂಘಟನೆಗಳಲ್ಲಿ ದುಡಿದಿದ್ದಾರೆ. ಸಂಘಟನೆಗಳಲ್ಲದೆ ಪರಿಸರ ಪ್ರೇಮಿಯಾಗಿ ಗುರ್ತಿಸಿಕೊಂಡಿರುವ ಇವರು ಬಿಳಗುಂಬ ಪ್ರೌಢಶಾಲೆ, ಪ್ರಾಥಮಿಕ ಶಲೆ, ದೇವಸ್ಥಾನ ಆವರಣ, ಪಶುವೈದ್ಯ ಕೇಂದ್ರ ಬಳಿ, ಕೂನಗಲ್ ಪ್ರೌಢಶಾಲೆ, ಬೆಟ್ಟ, ಪ್ರಾಥಮಿಕ ಶಾಲೆ, ತುಂಬೇನಹಳ್ಳಿ-ಹೆಬ್ಬಕೋಡಿ ಶಾಲೆ, ರಾಜೀವ್‌ಗಾಂಧಿಪುರ ಮತ್ತಿತರ ಸರ್ಕಾರಿ ಜಾಗಗಳಲ್ಲಿ ಗಿಡ ನೆಟ್ಟು ಪೋಷಣೆ ಮಾಡಿದ್ದಾರೆ.

ಕಲ್ಲಡ್ಕದ ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಕರ್ನಾಟಕ ಶ್ರೀರಾಮ ಶಾಲೆಯ ಪ್ರಶಸ್ತಿ

ಗಿಡ ನೆಡುವುದರ ಜೊತೆಗೆ ತಮ್ಮ ಹುಟ್ಟುಹಬ್ಬ, ಮಕ್ಕಳ ಹಬ್ಬ, ರಾಷ್ಟ್ರಕವಿ ಕುವೆಂಪು ಜನ್ಮದಿನ, ನಾಡ ಹಬ್ಬಗಳಲ್ಲಿ ಗಿಡ ವಿತರಣೆ ಮಾಡುವ ಮೂಲಕವೂ ಪರಿಸರ ಕಾಳಜಿ ಹೊಂದಿದ್ದಾರೆ. ಇವರ ಪರಿಸರ ಕಾಳಜಿ ಕನ್ನಡಪರ ಸೇವೆ ಮನಗಂಡು ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕಲ್ಲಡ್ಕದಲ್ಲಿ ಸನ್ಮಾನಿಸಿ ಗೌರವಿಸುತ್ತಿದೆ.

ರಾಜ್ಯಸರ್ಕಾರಕ್ಕೆ ನಾಚಿಕೆ ಆಗಬೇಕು

ವಿಶೇಷಚೇತನರಿಗೆ ದೊರೆಯದ ಮಾಶಾಸನ । ವಿಪಕ್ಷ ನಾಯಕ ಆರ್.ಅಶೋಕ್ ಕಿಡಿ

ರಾಮನಗರ: ಕಳೆದ ಐದು ತಿಂಗಳುಗಳಿಂದ ವಿಶೇಷ ಚೇತನರಿಗೆ ಮಾಸಾಶನ ಕೊಡುತ್ತಿಲ್ಲ, ಸರ್ಕಾರಕ್ಕೆ ನಾಚಿಕೆ ಆಗಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಿಡಿಕಾರಿದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಿಶೇಷ ಚೇತನರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ್ದ ವೇಳೆ ಅವರು ಮಾತನಾಡಿದರು.

ಈ ಹಿಂದೆ ಬರ ಬಂದಾಗ ರೈತರಿಗೆ 18 ರಿಂದ 40 ಸಾವಿರ ಪರಿಹಾರ ಕೊಟ್ಟಿದ್ದೇವೆ. ಆದರೆ, ಕಾಂಗ್ರೆಸ್ ಸರ್ಕಾರ 2500 ರೂ ಪರಿಹಾರ ಘೋಷಿಸಿದೆ. ಕೇವಲ ಮೂರು ದಿನ ಕೂಲಿಗೆ ಹೋದರೆ ಆ ಹಣ ಸಂಪಾದಿಸ ಬಹುದು. ಈ ಸರ್ಕಾರದ ಯೋಗ್ಯತೆ ಇಷ್ಟೇ ಎಂದು ರೈತರೇ ಪರಿಹಾರ ಹಣದ ಜೊತೆಗೆ 100 ರೂ ಸೇರಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ವಾಪಸ್ ಕೊಡುತ್ತಿದ್ದಾರೆ ಎಂದರು.

ವಿಕಲಚೇತನರ ಶಾಪ ತಟ್ಟದೆ ಬಿಡಲ್ಲ

ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿಯೇ ಹೋರಾಟ ನಡೆಸುತ್ತಿದ್ದರು ವಿಶೇಷ ಚೇತನರು ಕರೆದು ಮಾತನಾಡುವ ಸೌಜನ್ಯ ತೋರಿಸಿಲ್ಲ. ವಿಶೇಷ ಚೇತನರ ಬೇಡಿಕೆಗಳಲ್ಲಿ ಎಲ್ಲವನ್ನು ಅಲ್ಲದಿದ್ದರು ಕೆಲವನ್ನಾದರು ಈಡೇರಿಸಬಹುದಿತ್ತು. ಆದರೆ, ಇದು ಬಂಡೆ ಸರ್ಕಾರ ಎಂಬುದನ್ನು ಸಾಬೀತು ಆಗಿದೆ. ವಿಕಲಚೇತನರ ಶಾಪ ಈ ಸರ್ಕಾರಕ್ಕೆ ತಟ್ಟದೆ ಬಿಡಲ್ಲ. ಇವರ ಕಣ್ಣೀರಿಗೆ ಈ ಸರ್ಕಾರ ಭಸ್ಮವಾಗುತ್ತದೆ ಎಂದು ಎಚ್ಚರಿಸಿದರು.

ತಿಂಗಳಿಂದ ನೀವು ಸತ್ಯಾಗ್ರಹ ನಡೆಸುತ್ತಿದ್ದೀರಿ. ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದಿದ್ದರೆ ನಿಮ್ಮಲಿಗೆ ಬರಬೇಕಾಗಿತ್ತು. ಆದರೆ, ಬೆಳಗ್ಗೆಯಾದರೆ ಸಾಕು ಸರ್ಕಾರ ಸ್ಪಿಂಗ್ ನಲ್ಲಿಯೇ ಮುಳುಗಿ ಹೋಗಿದೆ. ರೈತರು, ದೀನ ದಲಿತರು ಹಾಗೂ ವಿಕಲಚೇತನರ ಬಗ್ಗೆ ಕಾಳಜಿಯೇ ಇಲ್ಲದಂತಾಗಿದೆ. ಈ ಸರ್ಕಾರ ಬೇಡಿಕೆ ಈಡೇರಿಸುತ್ತಾರೊ ಇಲ್ಲವೊ ಎಂಬುದು ಪಾದಯಾತ್ರೆ ಮೂಲಕವೇ ಫೈನಲ್ ಆಗಬೇಕು. ಅಲ್ಲಿವರೆಗೆ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಗಾಂಧಿ ಮಾರ್ಗದಲ್ಲಿ ಶಾಂತಿಯುತ ಹೋರಾಟ ಮುಂದುವರೆಯಲಿದೆ ಎಂದು ಅಶೋಕ್ ಎಚ್ಚರಿಕೆ ನೀಡಿದರು.

ತಲೆಯೂ ಖಾಲಿ, ಖಜಾನೆಯೂ ಖಾಲಿ!

ರೈತರಿಗೆ ಬರ ಪರಿಹಾರ ಹಾಗೂ ವಿಶೇಷ ಚೇತನರಿಗೆ ಮಾಸಾಶನ ಕೊಡಲು ಹಣ ಇಲ್ಲ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರ ತಲೆ ಖಾಲಿಯಾಗಿರುವಂತೆ ಈ ಸರ್ಕಾರದ ಖಜಾನೆಯೂ ಖಾಲಿ ಆಗಿ ಹೋಗಿದೆ ಎಂದು ವಾಗ್ದಾಳಿ ನಡೆಸಿದರು.

ಅನ್ಯಾಯ ಮತ್ತು ತುಳಿತಕ್ಕೆ ಒಳಗಾದವರ ಪರವಾಗಿ ಇರಬೇಕೆಂದು ಸಂವಿಧಾನ ಹೇಳುತ್ತದೆ. ಆ ಸಂವಿಧಾನದ ಪುಸ್ತಕವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೇಬಿನಲ್ಲಿ ಇಟ್ಟುಕೊಂಡು ಓಡಾಡುತ್ತಾರೆ. ಬಹುಶ ಆ ಪುಸ್ತಕ ಖಾಲಿ ಇರಬೇಕು. ಅವರ ತಲೆನು ಖಾಲಿಯಾಗಿದೆ, ಸರ್ಕಾರದ ಖಜಾನೆಯೂ ಖಾಲಿ ಆಗಿ ಹೋಗಿದೆ ಎಂದು ವ್ಯಂಗ್ಯವಾಡಿದರು. ಬರಗಾಲದಲ್ಲಿ ರೈತರು ಕಣ್ಣೀರು ಇಡುತ್ತಿದ್ದರೆ, ವೇತನ ಹೆಚ್ಚಳವಾಗದೆ, ಮಾಸಾಶನ ಸಿಗದೆ ಅಂಗವಿಕಲರ ಮನೆಗಳ ದೀಪ ಆರಿ ಹೋಗಿದೆ. ಆ ದೀಪಗಳನ್ನು ಬೆಳಗುವ ಯೋಗ್ಯತೆ ಇಲ್ಲದ ಮುಖ್ಯಮಂತ್ರಿಗಳು ದಸರಾದಲ್ಲಿ ದೀಪಾಲಂಕಾರ ಉದ್ಘಾಟಿಸಲು ಹೋಗಿದ್ದರು. 2 ಗಂಟೆ ವಿದ್ಯುತ್ ಕೊಡಲಾಗದಿದ್ದರೂ ಆಡಂಬರದ ದಸರಾ ಮಾಡಿಕೊಂಡು ದುಂದು ವೆಚ್ಚ ಮಾಡುತ್ತಿದ್ದಾರೆ ಎಂದರು.

ಹೋರಾಟಕ್ಕೆ ಸರ್ಕಾರ ಹೆದರಿದೆ :

ನಿಮ್ಮ ವಿರುದ್ಧ ಯಾರು ಶಿಸ್ತು ಕ್ರಮ ಕೈಗೊಳ್ಳುತ್ತಾರೊ ನಾನು ನೋಡುತ್ತೇನೆ. ಯಾರನ್ನಾದರು ಅಮಾನತ್ತು ಮಾಡಿದರೆ ಆ ಕಮಿಷನರ್‌ನ ಜನ್ಮ ಜಾಲಾಡಿ ಬಿಡುತ್ತೇನೆ. ಪರಿಹಾರ ಕೊಡೋದು ಬಿಟ್ಟು ನೋಟಿಸ್ ಕೊಡುತ್ತಿರುವ ನಿಮಗೆ ನಾಚಿಕೆ ಆಗೋದಿಲ್ವಾ, ಅವರಿಗೆಲ್ಲ ನೋಟಿಸ್ ಕೊಟ್ಟು ಬೆದರಿಕೆ ಹಾಕಿ ಕಿರುಕುಳ ನೀಡಿದರೆ ನೀನು ಉಳಿಯೋದು ಕಷ್ಟ ಎಂದು ಎಚ್ಚರಿಸಿದರು.

ಎಲ್ಲ ಅಧಿಕಾರಿಗಳು 2 ಲಕ್ಷ ಸಂಬಳ ಪಡೆದು ಗಾಲ್ಫ್ ಆಡಿಕೊಂಡಿದ್ದಾರೆ. ಆದರೆ, ಇಲ್ಲಿ ವಿಕಲಚೇತನರಿಗೆ ಕೇವಲ 10 ಸಾವಿರ ವೇತನ ಕೊಡಲಾಗದೆ ನೋಟಿಸ್ ಕೊಡುತ್ತಿದ್ದಾರೆ. ನಿಮಗೆಲ್ಲ ನೋಟಿಸ್ ಕೊಟ್ಟಿದ್ದಾರೆ ಅಂದರೆ ನಿಮ್ಮ ಹೋರಾಟಕ್ಕೆ ಸರ್ಕಾರ ಹೆದರಿದೆ ಎಂದರ್ಥ. ವಿಧಾನಸೌಧ ಮುಟ್ಟಿದರೆ ಮಾತ್ರ ಬೇಡಿಕೆಗಳು ಈಡೇರುತ್ತವೆ. ಅಲ್ಲಿವರೆಗೆ ಹೋರಾಟ ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಈ ಧರ್ಮದ ಹೋರಾಟಕ್ಕೆ ಜಯ ಸಿಗುತ್ತದೆ ಎಂದು ಹೇಳಿದರು.

2016ರ ಕಾಯಿದೆ ಪ್ರಕಾರ ಪೊಲೀಸರು ವಿಶೇಷ ಚೇತನರನ್ನು ಮುಟ್ಟುವಂತಿಲ್ಲ, ತಡೆಯೋ ಹಾಗಿಲ್ಲ. ಅವರನ್ನು ವಿಧಾನಸೌಧದವರೆಗೆ ಬರಲು ಅವಕಾಶ ನೀಡಿದರೆ ಕಾಂಗ್ರೆಸ್ ಸರ್ಕಾರ ಸತ್ತು ಹೋಗಿದೆ ಅಂತ ಸಂದೇಶ ರವಾನೆಯಾಗುತ್ತದೆ. ಕೂಡಲೇ ಸರ್ಕಾರ ವಿಕಲಚೇತನರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆರ್.ಅಶೋಕ್ ಒತ್ತಾಯಿಸಿದರು. ನವ ಕರ್ನಾಟಕ ಎಂಆರ್ ಡಬ್ಲ್ಯೂ, ವಿಆರ್ ಡಬ್ಲ್ಯೂ, ಯುಆರ್ ಡಬ್ಲ್ಯೂ ವಿಕಲಚೇತನರ ಗೌರವ ಧನ ಕಾರ್ಯಕರ್ತರ ಸಂಘದ ಸಂಸ್ಥಾಪಕ ಅಧ್ಯಕ್ಷ ಅಂಬಾಡಿ ಮೇಟಿ, ರಾಜ್ಯಾಧ್ಯಕ್ಷ ಫಕೀರ್ ಗೌಡ, ರಾಜ್ಯ ಸಂಚಾಲಕ ಅನಿಲ್ ಕೆ.ಗೌಡ , ಪದಾಧಿಕಾರಿಗಳಾದ ಯಶೋಧಾ, ನಾಗರಾಜು, ಗುರುಮಲ್ಲಮ್ಮ, ಬಿಜೆಪಿ ಮುಖಂಡರಾದ ಪ್ರಮೋದ್, ಗೌತಮ್ ಗೌಡ, ಪ್ರಸಾದ್ ಗೌಡ, ಆನಂದಸ್ವಾಮಿ, ದೇವರಾಜು, ಮಂಜುನಾಥ್ ಮತ್ತಿತರರು ಹಾಜರಿದ್ದರು.

ಹಣ ಇದೆ ಎಂದಾದರೆ ಮಾಶಾಸನ ಕೊಡಿ

ಈ ಸರ್ಕಾರ ಸಂಪೂರ್ಣವಾಗಿ ದಿವಾಳಿ ಆಗಿದೆ ಅಂತ ಹಣಕಾಸು ಇಲಾಖೆಯೇ ಒಪ್ಪಿಕೊಂಡಿದೆ. ಆದರೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಣ ಇದೆ ಅಂತಾರೆ. ಹಾಗಾದರೆ ವಿಕಲಚೇತನರಿಗೆ ಹಣ ಬಿಡುಗಡೆ ಮಾಡಲಿ. 5 ತಿಂಗಳಿಂದ ವಿಶೇಷ ಚೇತನರಿಗೆ ಮಾಸಾಶನ ಕೊಡುತ್ತಿಲ್ಲ ಅಂದರೆ ಸರ್ಕಾರಕ್ಕೆ ನಾಚಿಕೆ ಆಗೋದಿಲ್ವಾ ಎಂದು ಕಿಡಿಕಾರಿದರು. ಕಣ್ಣಿಲ್ಲದವರು, ಕಿವಿ ಕೇಳಿಸದವರು, ಕಾಲಿಲ್ಲದವರಿಗೆ 5 ತಿಂಗಳಿಂದ ಮಾಸಾಶನ ಕೊಡಲಾಗುತ್ತಿಲ್ಲ ಅಂದರೆ ಈ ಸರ್ಕಾರ ಬದುಕಿದ್ದು ಸತ್ತಂತೆ. ಊರಿಗೆ ಮನುಷ್ಯನಲ್ಲ, ಸ್ಮಶಾನಕ್ಕೆ ಹೆಣ ಅಲ್ಲ ಎಂಬ ಗಾದೆ ಮಾತಿನಂತೆ ಇದು ಎಡಂಬಡಂಗಿ ಸರ್ಕಾರ. ಕಣ್ಣೀರಿಡುವ ಜನರ ಭಾವನೆಗಳಿಗೆ ಧಕ್ಕೆ ತರುವ ಕೆಲಸವನ್ನು ಸರ್ಕಾರ ಮಾಡುತ್ತಿದೆ.

ಕೆ.ಗುಂಡಾಪುರದಲ್ಲಿ ಚಿರತೆ ದಾಳಿ

ಕುರಿ ಮೇಯಿಸಲು ಹೋದ ರೈತನಿಗೆ ಗಂಭೀರ ಗಾಯ

ಹನೂರು: ತಾಲ್ಲೂಕಿನ ಕೆ.ಗುಂಡಾಪುರ ಗ್ರಾಮದ ಬಳಿ ಚಿರತೆ ದಾಳಿ ನಡೆಸಿದ್ದು, ಕುರಿ ಮೇಯಿಸಲು ಹೋಗಿದ್ದ ರೈತ ಗಂಭೀರವಾಗಿ ಗಾಯಗೊಂಡಿದ್ದಾರೆ.

ಗಾಯಗೊಂಡವರನ್ನು ಕೆ.ಗುಂಡಾಪುರ ಗ್ರಾಮದ ಚಿನ್ನರಾಜು ಬಿನ್ ನಿಂಗಯ್ಯ (33) ಎಂದು ಗುರುತಿಸಲಾಗಿದೆ. ಚಿನ್ನರಾಜು ಅವರು ಕುರಿ ಮೇಯಿಸಲು ಹೊಲದ ಕಡೆ ಹೋಗಿದ್ದಾಗ ಪೊದೆಯಲ್ಲಿದ್ದ ಚಿರತೆ ಏಕಾಏಕಿ ದಾಳಿ ನಡೆಸಿದೆ. ದಾಳಿಯಲ್ಲಿ ಅವರ ಮುಖ, ತೋಳು ಮತ್ತು ಕೈ ಭಾಗಕ್ಕೆ ತೀವ್ರ ಗಾಯಗಳಾಗಿವೆ.

ರಕ್ತಸ್ರಾವದಿಂದ ನರಳುತ್ತಿದ್ದ ಅವರನ್ನು ಕಂಡು ಸ್ಥಳೀಯರು ಮತ್ತು ಕುಟುಂಬಸ್ಥರು ನೆರವಿಗೆ ಧಾವಿಸಿ, ತಕ್ಷಣ ಆಸ್ಪತ್ರೆಗೆ ಸಾಗಿಸಿದ್ದಾರೆ. ಗಾಯಾಳು ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಷಯ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಳೆದ ಕೆಲ ದಿನಗಳಿಂದ ಈ ಭಾಗದಲ್ಲಿ ಚಿರತೆ ಓಡಾಟ ಕಂಡುಬಂದಿದ್ದು, ಕುರಿ ಸಾಕಣೆದಾರರು ಹಾಗೂ ರೈತರ

ಶ್ರೀರಂಗಪಟ್ಟಣದಲ್ಲಿ ವಿದ್ಯಾರ್ಥಿಗಳಿಗೆ ಮಗ್ಗಿ ಪುಸ್ತಕ ಚಲನಚಿತ್ರ ಪ್ರದರ್ಶನ

ಮಂಡ್ಯ: ಇಂದಿನ ಡಿಜಿಟಲ್ ಯುಗದಲ್ಲಿ ಅತಿಯಾದ ಮೊಬೈಲ್ ಬಳಕೆಯ ದುಷ್ಪರಿಣಾಮಗಳ ಕುರಿತು ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಶ್ರೀರಂಗಪಟ್ಟಣದ ಶ್ರೀದೇವಿ ಚಿತ್ರಮಂದಿರದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ 'ಮಗ್ಗಿ ಪುಸ್ತಕ' ಚಲನಚಿತ್ರ ಪ್ರದರ್ಶನವನ್ನು ಪ್ರದರ್ಶಿಸಲಾಯಿತು.

ಪ್ರಸ್ತುತ ದಿನಗಳಲ್ಲಿ ಮೊಬೈಲ್ ಬಳಕೆ ಅನಿವಾರ್ಯವಾಗಿದ್ದು, ಮಕ್ಕಳು ಓದಿನ ನೆಪದಲ್ಲಿಯೂ ಮೊಬೈಲ್‌ಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಮೊಬೈಲ್ ಅನ್ನು ಸಕಾರಾತ್ಮಕವಾಗಿ ಬಳಸಿದರೆ ಜ್ಞಾನಾರ್ಜನೆ, ಶೈಕ್ಷಣಿಕ ಮಾಹಿತಿ ಸಂಗ್ರಹ ಹಾಗೂ ಕಲಿಕಾ ಪ್ರಕ್ರಿಯೆಗೆ ಪೂರಕವಾಗುತ್ತದೆ. ಆದರೆ, ಅದರ ಅತಿಯಾದ ಅಥವಾ ನಕಾರಾತ್ಮಕ ಬಳಕೆಯು ಮಕ್ಕಳ ವಿದ್ಯಾಭ್ಯಾಸ, ಏಕಾಗ್ರತೆ, ನಡವಳಿಕೆ ಹಾಗೂ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರಬಹುದು. ಈ ಹಿನ್ನೆಲೆಯಲ್ಲಿ ಮೊಬೈಲ್ ಬಳಕೆಯ ಸಾಧಕ-ಬಾಧಕಗಳನ್ನು ಮಕ್ಕಳಿಗೆ ಮನದಟ್ಟು ಮಾಡಿ, ತಂತ್ರಜ್ಞಾನವನ್ನು ವಿವೇಚನೆಯಿಂದ ಬಳಸುವ ಅರಿವು ಮೂಡಿಸುವಲ್ಲಿ ಚಲನಚಿತ್ರ ಪ್ರದರ್ಶನ ಮಹತ್ವದ ಪಾತ್ರ ವಹಿಸಿತು.

ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದು, ಮಕ್ಕಳ ಪ್ರಸ್ತುತಿಯೂ ಅತ್ಯುತ್ತಮವಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿರುವುದು ಸಂತಸ ತಂದಿದೆ. ಇಂತಹ ಜಾಗೃತಿ ಕಾರ್ಯಕ್ರಮಗಳು ಮಕ್ಕಳಲ್ಲಿ ಸಾಮಾಜಿಕ ಜವಾಬ್ದಾರಿ, ಉತ್ತಮ ಅಭ್ಯಾಸಗಳು ಹಾಗೂ ತಂತ್ರಜ್ಞಾನದ ಸಮರ್ಪಕ ಬಳಕೆಯ ಕುರಿತು ಅರಿವು ಬೆಳೆಸಲು ಸಹಕಾರಿಯಾಗಲಿವೆ.

ಸಂಪಿಗೆಪುರ ಗ್ರಾಮಕ್ಕೆ ನುಗ್ಗಿದ ಚಿರತೆ; ಕುರಿ ಬಲಿ

ಗುಂಡ್ಲುಪೇಟೆ, : ತಾಲೂಕಿನ ಸಂಪಿಗೆಪುರ ಗ್ರಾಮದಲ್ಲಿ ಮುಂಜಾನೆ ಚಿರತೆಯೊಂದು ಗ್ರಾಮದೊಳಗೆ ನುಗ್ಗಿ ಕುರಿಯನ್ನು ಬೇಟೆಯಾಡಿ ತಿಂದಿರುವ ಘಟನೆ ನಡೆದಿದೆ.

ಗ್ರಾಮದ ವಸಂತ ಎಂಬುವರಿಗೆ ಸೇರಿದ ಕುರಿಯನ್ನು ಮುಂಜಾನೆ ಸುಮಾರು 3 ಗಂಟೆಯ ವೇಳೆಯಲ್ಲಿ ಚಿರತೆ ಎಳೆದೊಯ್ದು ಕೊಂದು ತಿಂದಿದೆ ಎನ್ನಲಾಗಿದೆ. ಗ್ರಾಮದೊಳಗೆ ಚಿರತೆ ಪ್ರವೇಶಿಸಿ ಕುರಿಯನ್ನು ಬೇಟೆಯಾಡಿರುವ ವಿಷಯ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಗ್ರಾಮದೊಳಗೇ ಚಿರತೆ ಸಂಚರಿಸುತ್ತಿರುವುದರಿಂದ ಗ್ರಾಮಸ್ಥರಲ್ಲಿ ಆತಂಕ ಮನೆಮಾಡಿದೆ. ರೈತರು ತಮ್ಮ ಜಾನುವಾರುಗಳನ್ನು ಮೇಯಿಸಲು ಕರೆದೊಯ್ಯಲು ಹಾಗೂ ರಾತ್ರಿ ವೇಳೆ ಕೊಟ್ಟಿಗೆಯಲ್ಲಿ ಇರಿಸಲು ಭಯಪಡುವಂತಾಗಿದೆ. ಚಿರತೆಯ ಸಂಚಾರದಿಂದ ಜಾನುವಾರುಗಳ ಸುರಕ್ಷತೆಯ ಬಗ್ಗೆ ರೈತರು ಕಳವಳ ವ್ಯಕ್ತಪಡಿಸಿದ್ದಾರೆ.

ಚಿರತೆಯ ಚಲನವಲನದ ಮೇಲೆ ನಿಗಾ ವಹಿಸಲು ಆಗ್ರಹ

ಸಂಪಿಗೆಪುರ ಗ್ರಾಮದ ಸುತ್ತಮುತ್ತ ಚಿರತೆಯ ಚಲನವಲನದ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ನಿಗಾ ವಹಿಸಬೇಕು. ಚಿರತೆಯನ್ನು ಪತ್ತೆಹಚ್ಚಿ ಜನವಸತಿ ಪ್ರದೇಶಕ್ಕೆ ಮತ್ತೆ ಪ್ರವೇಶಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಅಲ್ಲದೆ, ಗ್ರಾಮಸ್ಥರು ಹಾಗೂ ಜಾನುವಾರುಗಳ ಸುರಕ್ಷತೆಗೆ ಅರಣ್ಯ ಇಲಾಖೆ ಆದ್ಯತೆ ನೀಡಬೇಕು. ಚಿರತೆ ದಾಳಿಯಿಂದ ಕುರಿ ಕಳೆದುಕೊಂಡಿರುವ ರೈತ ವಸಂತ ಅವರಿಗೆ ನಿಯಮಾನುಸಾರ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಕೆಆರ್‌ಎಸ್ ಹೂಳೆತ್ತಲು ನಿಶ್ಚಲಾನಂದನಾಥ ಸ್ವಾಮೀಜಿ ಆಗ್ರಹ

ಮಂಡ್ಯ: ಕಾವೇರಿ ಮಾತೆ ಮಂಡ್ಯಕ್ಕೆ ಮಾತ್ರ ತಾಯಿ ಅಲ್ಲ, 3.2 ಕೋಟಿ ಜನರಿಗೆ ಜೀವನ ನೀಡುವ ಜೀವನಾಡಿಯಾಗಿದ್ದು, 96 ವರ್ಷದಿಂದ ಹೂಳೆತ್ತದೇ ಇರುವ ಕೆ.ಆರ್.ಎಸ್ ಅಣೆಕಟ್ಟನ್ನು ಹೂಳೆತ್ತಿ, ಮೇಕೆದಾಟು ಯೋಜನೆ ನಿರ್ಮಿಸಿದರೆ ಮುಂದಿನ 25-30 ವರ್ಷಗಳ ಕಾಲ 3 ಕೋಟಿ ಜನರಿಗೆ ನೆಮ್ಮದಿ ಸಿಗುತ್ತದೆ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಕಾವೇರಿ ವನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ವತಿಯಿಂದ ಕಾವೇರಿ ತೀರ್ಥೋದ್ಭವ ಪ್ರಯುಕ್ತ ಆಯೋಜಿಸಿದ್ದ ಕಾವೇರಿ ಮಾತೆ ಪೂಜೆ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಮೂಲಕ ಬಹಳ ವರ್ಷಗಳಿಂದಲೂ ತಲಕಾವೇರಿಯಲ್ಲಿ ತೀರ್ಥೋದ್ಭವದ ಸಂದರ್ಭದಲ್ಲಿ ಮಂಡ್ಯದ ನಾವು ಅಲ್ಲಿ ಭಾಗವಹಿಸಿ ಪೂಜೆ ಸಲ್ಲಿಸಿ ಬಂದ ಭಕ್ತರಿಗೆ ಅನ್ನಪ್ರಸಾದ ಕೊಡುವ ಸಂಪ್ರದಾಯ ಹುಟ್ಟುಹಾಕಿದ್ದು, ಟ್ರಸ್ಟ್ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಅವರು ಕಾವೇರಿ ತಾಯಿಯ ಋಣ ತೀರಿಸುವ ಉದ್ದೇಶದಿಂದ ಈ ಕೆಲಸ ಮಾಡುತ್ತಿದ್ದಾರೆ ಎಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾವೇರಿ ನಮಗೆ ಉಚಿತವಾಗಿ ಸಿಕ್ಕಿದೆ. ಡ್ಯಾಮ್‌ಗೋಸ್ಕರ 32 ಕಿಲೋಮೀಟರ್

ವ್ಯಾಪ್ತಿಯಲ್ಲಿ ಸಾವಿರಾರು ಎಕರೆ ಭೂಮಿಯನ್ನು ರೈತರು ಕಳೆದುಕೊಂಡಿದ್ದಾರೆ, ಅದು ಅವರ ತ್ಯಾಗ. 1932ರಿಂದ 2026ರವರೆಗೆ 96 ವರ್ಷಗಳಿಂದ ಒಂದೇ ಒಂದು ಸಣ್ಣ ಹೂಳನ್ನೂ ಎತ್ತಿಲ್ಲ. ಹೋದ ವರ್ಷ ಜೂನ್ ತಿಂಗಳಲ್ಲೇ ಡ್ಯಾಮ್ ತುಂಬಿ ತುಳುಕಿ ಸಂತೋಷಪಟ್ಟೆವು, ಈ ವರ್ಷದ ಪರಿಸ್ಥಿತಿ ನೋಡಿ. ಹೋದ ಬಾರಿ 370 ಟಿಎಂಸಿ ನೀರು ಹರಿದು ಸಮುದ್ರ ಸೇರಿದೆ, ನಾವು ಬಿಡಬೇಕಾದ್ದು 177 ಟಿಎಂಸಿ ಮಾತ್ರ. ಹಾಗಾಗಿ ಕೆ.ಆರ್.ಎಸ್ ಹೂಳೆತ್ತುವ ಕಾರ್ಯ ಮತ್ತು ಮೇಕೆದಾಟು ಯೋಜನೆ ಎರಡೂ ಆದರೆ ವಾಟರ್ ಸ್ಟೋರೇಜ್ ಜಾಸ್ತಿಯಾಗಿ ತಮಿಳುನಾಡು ಜೊತೆ ಸಂಘರ್ಷವೂ ತಣ್ಣಗಾಗುತ್ತದೆ. ಸುಪ್ರೀಂ ಕೋರ್ಟ್ ಕೂಡ ಮೇಕೆದಾಟು ಮಾಡಲು ಕರ್ನಾಟಕಕ್ಕೆ ಯಾರ ಪರ್ಮಿಷನ್ ಬೇಕಿಲ್ಲ ಎಂದು ಹೇಳಿದೆ.ನೀರನ್ನು ಪೋಲು ಮಾಡಬಾರದು. ಮನೆ, ಕೃಷಿ, ಕೈಗಾರಿಕೆಯಲ್ಲಿ ನೀರನ್ನು ಮಿತವ್ಯಯದಿಂದ ಬಳಸಬೇಕು ಎಂದು ತಿಳಿಸಿದರು.

ಕೃಷಿ ಬಜೆಟ್‌ಗೆ ಆಗ್ರಹ:

ಸರ್ಕಾರ ಈ ಸಲ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಲಿ. ಮಣ್ಣು, ನೀರು, ಕೆರೆಗಳು, ಸಾವಯವ ಕೃಷಿ ಮತ್ತು ಮಾರುಕಟ್ಟೆ ಈ ಐದು ಅಂಶಗಳ ಮೇಲೆ ವಿಷನ್ ಇಟ್ಟುಕೊಂಡು ಯೋಜನೆ ರೂಪಿಸಿದರೆ ರೈತರ ಬದುಕು ಹಸನಾಗುತ್ತದೆ. ರಾಜ್ಯದಲ್ಲಿ 38,043 ಕೆರೆ-ಕಲ್ಯಾಣಿಗಳಿವೆ. ಪ್ರತಿ ಗ್ರಾಮ ಪಂಚಾಯಿತಿಗೆ ಐದೈದು ಕೆರೆ ಮಾಡಿ ಉಳಿಸಿ ಎಂದರೆ ಉದ್ಯೋಗ ಸೃಷ್ಟಿ, ಅಂತರ್ಜಲ ವೃದ್ಧಿ ಆಗುತ್ತದೆ ಎಂದು ಸ್ವಾಮೀಜಿ ಕರೆ ನೀಡಿದರು.ಎಂದು ಸ್ವಾಮೀಜಿ ಕರೆ ನೀಡಿದರು.

ಕಾವೇರಿ ಆಶೀರ್ವಾದದಿಂದ ಮಂಡ್ಯ ಹಸಿರು ನಾಡು : ಎಡಿಸಿ ಶಿವಾನಂದಮೂರ್ತಿ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಅವರು, ಕಾವೇರಿ ಮಾತೆಯ ಆಶೀರ್ವಾದ, ಕೆಆರ್‌ಎಸ್ ನಿರ್ಮಾಣ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯಿಂದ ಮಂಡ್ಯ ಹಸಿರು ನಾಡಾಗಿದೆ. ಹಿಂದೆ ನೀರಾವರಿ ಕೊರತೆಯಿಂದ ಸಂಕಷ್ಟ ಇತ್ತು, ಕೆಆರ್‌ಎಸ್ ನಂತರ ಕೃಷಿ ಮತ್ತು ಆರ್ಥಿಕ ಪ್ರಗತಿ ಸಾಧ್ಯವಾಯಿತು. ನಾಲ್ವಡಿ ಅವರ ಜನಪರ ಆಡಳಿತ ಮುಂದಿನ ಪೀಳಿಗೆಗೆ ಮಾದರಿ ಎಂದರು.ಕೊಳವೆಬಾವಿಗಳ ಅತಿಯಾದ ಬಳಕೆಯಿಂದ ಅಂತರ್ಜಲ ಕುಸಿಯುತ್ತಿದೆ. ಕೆರೆಕಟ್ಟೆಗಳ ಹೂಳೆತ್ತಿ ಮಳೆನೀರು ಸಂಗ್ರಹಿಸಿ ಅಂತರ್ಜಲ ಹೆಚ್ಚಿಸಬೇಕು. ಲಭ್ಯವಿರುವ ನೀರನ್ನು ಸಮರ್ಥವಾಗಿ ಬಳಸಬೇಕು. ಜಲಸಂರಕ್ಷಣೆಯನ್ನು ಜನಾಂದೋಲನವಾಗಿಸಬೇಕು ಎಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ಮಂಡ್ಯ ಉಪವಿಭಾಗಾಧಿಕಾರಿ ಶಿವಮೂರ್ತಿ, ಮಾಜಿ ಶಾಸಕ ಎಂ. ಶ್ರೀನಿವಾಸ್, ಡಾ. ಸಿದ್ದರಾಮಯ್ಯ, ನಾಗಚಂದ್ರ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಬೆಟ್ಟಸ್ವಾಮಿ, ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ನಂಜುಂಡೇಗೌಡ, ನಂದೀಶ್, ಚೇತನ್ ಶೇಖರ್, ಜಯಶಂಕರ್ ಸೇರಿದಂತೆ ಟ್ರಸ್ಟ್ ಪದಾಧಿಕಾರಿಗಳು ಮತ್ತು ಸಾರ್ವಜನಿಕರು ಹಾಜರಿದ್ದರು.

ಪ್ರಿಯಾಂಕ್ ಖರ್ಗೆ ವಿರುದ್ಧ ಕುಮಾರಸ್ವಾಮಿ ವೈಯಕ್ತಿಕ ನಿಂದನೆ

ದಲಿತ-ಪ್ರಗತಿಪರ ಸಂಘಟನೆಗಳ ಪ್ರತಿಭಟನೆ

ಮಂಡ್ಯ: ಕರ್ನಾಟಕ ಸರ್ಕಾರದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮಾಡುತ್ತಿರುವ ವೈಯಕ್ತಿಕ ಟೀಕೆಗಳು, ಅವಹೇಳನಕಾರಿ ಹೇಳಿಕೆಗಳು ಮತ್ತು ಬೆದರಿಕೆಯ ಧಾಟಿಯ ಮಾತುಗಳನ್ನು ಖಂಡಿಸಿ ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜೆಸಿ ವೃತ್ತದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು, ಕಾಂಗ್ರೆಸ್ ಮುಖಂಡರು ಮತ್ತು ದಸಂಸ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ಘೋಷಣೆಗಳನ್ನು ಕೂಗಿ, ವ್ಯಂಗ್ಯ ಚಿತ್ರಗಳನ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಮೈಸೂರು-ಬೆಂಗಳೂರು ಹೆದ್ದಾರಿಯ ಜೆಸಿ ವೃತ್ತದಲ್ಲಿ ಹತ್ತು ನಿಮಿಷಗಳ ಕಾಲ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಿದರು. ಈ ವೇಳೆ ಸಂಚಾರ ಅಸ್ತವ್ಯಸ್ತಗೊಂಡಿತು.

ವೈಯಕ್ತಿಕ ನಿಂದನೆ ಪ್ರಜಾಪ್ರಭುತ್ವದ ಆರೋಗ್ಯಕರ ಸಂಸ್ಕೃತಿಗೆ ವಿರುದ್ಧ – ಕುಮಾರ್ ಕೊಪ್ಪ

ಪ್ರತಿಭಟನೆಯಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕುಮಾರ್ ಕೊಪ್ಪ ಅವರು, ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರು ದೊಡ್ಡ ಮನೆಯವರಾಗಿದ್ದು, ಎರಡು ಬಾರಿ ಮುಖ್ಯಮಂತ್ರಿಗಳಾಗಿದ್ದು ಇದೆಲ್ಲವನ್ನು ಮರೆತು ರಾಜಕೀಯ ಭಿನ್ನಾಭಿಪ್ರಾಯಗಳನ್ನು ವೈಯಕ್ತಿಕ ನಿಂದನೆಯ ಮಟ್ಟಕ್ಕೆ ಕೊಂಡೊಯ್ಯುವುದು ಪ್ರಜಾಪ್ರಭುತ್ವದ ಆರೋಗ್ಯಕರ ಸಂಸ್ಕೃತಿಗೆ ವಿರುದ್ಧವಾಗಿದೆ ಎಂದು ಎಚ್ಚರಿಸಿದರು.

ಸಾರ್ವಜನಿಕ ಜೀವನದಲ್ಲಿರುವವರು ತಮ್ಮ ಮಾತು ಮತ್ತು ನಡವಳಿಕೆಯಲ್ಲಿ ಸಂಯಮ, ಪರಸ್ಪರ ಗೌರವ ಹಾಗೂ ಸಂವಿಧಾನಾತ್ಮಕ ಮೌಲ್ಯಗಳನ್ನು ಪಾಲಿಸಬೇಕು. ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ರಾಜಕೀಯ ನಿಲುವುಗಳು, ಆಡಳಿತಾತ್ಮಕ ಕಾರ್ಯವೈಖರಿ ಮತ್ತು ಸಾರ್ವಜನಿಕ ವಿಚಾರಗಳ ಕುರಿತಾದ ಸ್ಪಷ್ಟ ಅಭಿಪ್ರಾಯಗಳಿಂದ ರಾಜ್ಯ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದಾರೆ. ಅವರ ಹೇಳಿಕೆಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೆ ಅದನ್ನು ವಿಷಯಾಧಾರಿತವಾಗಿ, ದಾಖಲೆಗಳ ಆಧಾರದಲ್ಲಿ ಮತ್ತು ಪ್ರಜಾಸತ್ತಾತ್ಮಕ ವೇದಿಕೆಗಳಲ್ಲಿ ವ್ಯಕ್ತಪಡಿಸಬಹುದು. ಆದರೆ "ಗೃಹ ಇಲಾಖೆ ನಿಮ್ಮಪ್ಪಂದ" ಎಂಬಂತಹ ವೈಯಕ್ತಿಕ ನಿಂದನಾತ್ಮಕ ಹೇಳಿಕೆಗಳ ಮೂಲಕ ಒಬ್ಬ ಸಚಿವರ ಘನತೆಯನ್ನು ಕುಗ್ಗಿಸುವ ಪ್ರಯತ್ನವನ್ನು ಸಮರ್ಥಿಸಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ಬಳಿಕ ಮಾತನಾಡಿದ ದಸಂಸ ಮುಖಂಡ ವಕೀಲ ಮಂಜುನಾಥ್ ಸುಂಡಹಳ್ಳಿ ಅವರು, ನಮ್ಮ ನಾಯಕರಾದ ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ಅವರ ಬಗ್ಗೆ ಎಚ್.ಡಿ. ಕುಮಾರಸ್ವಾಮಿ ಅವರು ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿ. ಅಂತಹ ಸ್ಥಾನದಲ್ಲಿರುವವರು ಬಳಸುವ ಭಾಷೆ ಸಮಾಜಕ್ಕೆ ಮಾದರಿಯಾಗಿರಬೇಕು. ರಾಜಕೀಯ ವಿರೋಧಿಯನ್ನು ಟೀಕಿಸುವ ಹಕ್ಕು ಎಲ್ಲರಿಗೂ ಇದೆ; ಆದರೆ ಆ ಟೀಕೆ ವೈಯಕ್ತಿಕ ಅವಮಾನ, ಬೆದರಿಕೆ ಅಥವಾ ಸಾಮಾಜಿಕವಾಗಿ ನೋವುಂಟುಮಾಡುವ ಹೇಳಿಕೆಗಳ ರೂಪ ಪಡೆಯಬಾರದು. ರಾಜಕೀಯ ಸಂವಾದದ ಗುಣಮಟ್ಟವನ್ನು ಕಾಪಾಡುವುದು ಪ್ರಜಾಪ್ರಭುತ್ವದ ಉಳಿವಿಗೆ ಅತ್ಯಗತ್ಯ ಎಂದು ಎಚ್ಚರಿಸಿದರು.

ಪ್ರಜಾಪ್ರಭುತ್ವದಲ್ಲಿ ಪ್ರಶ್ನಿಸುವುದು, ಟೀಕಿಸುವುದು ಮತ್ತು ಉತ್ತರ ಕೇಳುವುದು ಸಹಜ ಪ್ರಕ್ರಿಯೆ. ಆದರೆ ವ್ಯಕ್ತಿಯನ್ನು ಗುರಿಯಾಗಿಸಿಕೊಂಡು ಅವಹೇಳನಕಾರಿ ಭಾಷೆ ಬಳಸುವುದು ಆರೋಗ್ಯಕರ ರಾಜಕೀಯ ಚರ್ಚೆಗೆ ಪರ್ಯಾಯವಾಗಲಾರದು ಎಂದು ಹೇಳಿದರು.

ಮಂಡ್ಯ ಜಿಲ್ಲಾ ಸಂಸದರಾಗಿರುವ ಕುಮಾರಸ್ವಾಮಿ ಅವರು ಮಂಡ್ಯ ಜಿಲ್ಲೆಗೆ ಯಾವುದೇ ಕಾರ್ಖಾನೆಯಾಗಲಿ, ಅಭಿವೃದ್ಧಿ ಕೆಲಸಗಳಾಗಲಿ ಮಾಡದೆ ಮೂರು ವರ್ಷಗಳ ಕಾಲ ಕಳೆದು ಜನಸಾಮಾನ್ಯರ ನಿರೀಕ್ಷೆಯನ್ನು ಹುಸಿಗೊಳಿಸಿದ್ದಾರೆ. ಇವರನ್ನು ಕೇಂದ್ರ ಸರ್ಕಾರ ತಕ್ಷಣವೇ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಸಂಸ ಮತ್ತು ಪ್ರಗತಿಪರ ಸಂಘಟನೆಯ ಮುಖಂಡರಾದ ಗುರುಪ್ರಸಾದ್ ಕೆರಗೋಡು, ವಿಜಯಲಕ್ಷ್ಮಿ, ರಘುನಂದನ್, ಬಿ.ಪಿ. ಪ್ರಕಾಶ್, ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಸಿ.ಡಿ. ಗಂಗಾಧರ್, ಕಾರ್ಯಾಧ್ಯಕ್ಷ ಎಂ.ಎಸ್. ಚಿದಂಬರ್,ಸಿ. ಎಂ.ದ್ಯಾವಪ್ಪ, ವಿಜಯಕುಮಾರ್, ಗ್ಯಾರಂಟಿ ಉದಯ್, ಅಭಿಲಾಶ್, ಎಲ್. ಕೃಷ್ಣ, ಜಾರ್ಜ್ ಮೋಹನ್, ಕುಮಾರ್, ನಾಗರತ್ನ, ಲವ, ದೀಪಕ್, ಆಟೋ ಕೃಷ್ಣ, ಗುರುಶಂಕರ್ ಸೇರಿದಂತೆ ಹಲವರು ಹಾಜರಿದ್ದರು.

ದಸರಾ-2026 ಅಂಗವಾಗಿ ವಿವಿಧ ವಯೋಮಾನದ ಸ್ಪರ್ಧಿಗಳ ಉತ್ಸಾಹಭರಿತ ಪಾಲ್ಗೊಳ್ಳುವಿಕೆ

ಶ್ರೀರಂಗಪಟ್ಟಣದಲ್ಲಿ ಬೆಟ್ಟ ಹತ್ತುವ ಚಾರಣ ಯಶಸ್ವಿ

ಮಂಡ್ಯ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಶ್ರೀರಂಗಪಟ್ಟಣ ದಸರಾ 2026ರ ಅಂಗವಾಗಿ ಆಯೋಜಿಸಿದ್ದ ಬೆಟ್ಟ ಹತ್ತುವ ಚಾರಣ ಕಾರ್ಯಕ್ರಮ ಯಶಸ್ವಿಗೊಂಡಿತು ಎಂದು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಮನುಜಶ್ರೀ ಅವರು ತಿಳಿಸಿದರು.

ಶ್ರೀರಂಗಪಟ್ಟಣದಲ್ಲಿ ಇಂದು ಆಯೋಜಿಸಿದ್ದ ಚಾರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ಜೀವನಶೈಲಿಯಲ್ಲಿ ದೈಹಿಕ ಚಟುವಟಿಕೆಗಳ ಕೊರತೆ ಹಾಗೂ ಅನಾರೋಗ್ಯಕರ ಆಹಾರ ಪದ್ಧತಿಯಿಂದಾಗಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತಿವೆ. ಇಂತಹ ಸಂದರ್ಭದಲ್ಲಿ ಬೆಟ್ಟ ಹತ್ತುವಿಕೆ, ನಡಿಗೆ ಹಾಗೂ ನಿಯಮಿತ ವ್ಯಾಯಾಮದಂತಹ ಚಟುವಟಿಕೆಗಳು ದೈಹಿಕ ಸದೃಢತೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತವೆ. ಸಾರ್ವಜನಿಕರಲ್ಲಿ ಆರೋಗ್ಯದ ಮಹತ್ವದ ಕುರಿತು ಅರಿವು ಮೂಡಿಸಿ, ದೈಹಿಕ

ಕ್ಷಮತೆಯನ್ನು ವೃದ್ಧಿಸುವ ಉದ್ದೇಶದಿಂದ ಜಿಲ್ಲಾಡಳಿತ ಈ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದರು.

ಚಾರಣ ಕಾರ್ಯಕ್ರಮದಲ್ಲಿ 20 ವ

ನವರಾತ್ರಿ ಹಬ್ಬದ ಮಹತ್ವ

। ಮಾಧುರಿ ದೇಶಪಾಂಡೆ, ಬೆಂಗಳೂರು

ನವರಾತ್ರಿಯು ಆಧ್ಯಾತ್ಮಿಕವಾಗಿ ಬಹಳ ಮಹತ್ವವನ್ನು ಪಡೆದಿದೆ. ನವರಾತ್ರಿ ದೇವಿ ಉಪಾಸಕರ ಉತ್ಸವ, ಪರಮಾತ್ಮನ ಉತ್ಸವ, ವೈಷ್ಣವರು ಶ್ರೀ ವೇಂಕಟೇಶನ ನವರಾತ್ರಿಯನ್ನು ಆಚರಿಸಿದರೆ, ಶಾಕ್ತರು ಮತ್ತು ಶೈವರು ದೇವಿಯ ಆರಾಧನೆಯನ್ನು ವಿಶೇಷವಾಗಿ ಮಾಡುತ್ತಾರೆ. ನವರಾತ್ರಿಯಲ್ಲಿ ದೀಪೋತ್ಸವ ಬಹಳ ಮಹತ್ವ ಪಡೆಯುತ್ತದೆ. ದಕ್ಷಿಣ ಭಾರತದಲ್ಲಿ ದೇವಿ ಮತ್ತು ವೆಂಕಟೇಶ ದೇವರ ಪೂಜೆಯು ನಡೆದರೆ ಉತ್ತರ ಭಾರತದಲ್ಲಿ ರಾಮಲೀಲಾ ಉತ್ಸವವು ಮಹತ್ವ ಪಡೆದಿರುತ್ತದೆ.

ತ್ರೇತಾಯುಗದಲ್ಲಿ ನವರಾತ್ರಿಯಲ್ಲಿಯೇ ಯುದ್ಧವು ನಡೆದು ದಶಮಿಯ ದಿನ ರಾವಣನ ವಧೆ ಆದ ಕಾರಣ ಇಂದಿಗೂ ದಶಮಿಯದಿನ ರಾವಣಾಸುರನ ಪುತ್ಥಳಿಯನ್ನು ಮಾಡಿ ಅವನ ವಧೆಯನ್ನು ಮಾಡಿ ಸಂಭ್ರಮಿಸುತ್ತಾರೆ. ದ್ವಾಪರದಲ್ಲಿ ಅಜ್ಞಾತವಾಸ ಮುಗಿಯುವ ಸಮಯದಲ್ಲಿ ವಿರಾಟನಗರದ ಮೇಲೆ ದಂಡೆತ್ತಿ ಬಂದ ದುರ್ಯೋಧನಾದಿಗಳನ್ನು ಬೃಹನ್ನಳೆಯ ರೂಪದಲ್ಲಿದ್ದ ಅರ್ಜುನನು ಉತ್ತರ ಕುಮಾರನೊಂದಿಗೆ ಹೋಗಿ ವಿಜಯವನ್ನು ಸಾಧಿಸಿದ ನಂತರ ಬನ್ನಿ ಪೂಜೆಯನ್ನು ಮಾಡುತ್ತಾನೆ. ಆಯುಧ ಪೂಜೆ ಬನ್ನಿ ಪೂಜೆಯು ದ್ವಾಪರ ಯುಗದ ಕಥೆಗಳಾದರೆ. ದ್ವಾಪರದ ಕೊನೆಯಲ್ಲಿ ಶ್ರೀ ವೆಂಕಟೇಶನ ಕಲ್ಯಾಣದ ಮೂಲಕ ಲೋಕ ಶಿಕ್ಷಣವನ್ನು ಮಾಡುತ್ತಾನೆ. ಇವೆಲ್ಲವೂ ಪೌರಾಣಿಕ ಮಹತ್ವವನ್ನು ಸಾರುತ್ತವೆ.

ಧಾರ್ಮಿಕವಾಗಿ ದೇವಿಯು ಶಕ್ತಿ ಸ್ವರೂಪಳು, ಅವಳ ಆರಾಧನೆಯಿಂದ ನಮಗೆ ಶಕ್ತಿ, ಭಕ್ತಿ ಎರಡೂ ದೊರೆಯುತ್ತದೆ. ಮಳೆಗಾಲದ ಈ ಸಮಯದಲ್ಲಿ ಹೊರಗೆ ತಿರುಗುವ ಪರಿಸ್ಥಿತಿ ಇಲ್ಲವಾದ್ದರಿಂದ ಮನೆಯಲ್ಲಿಯೇ ಇದ್ದು ಪೂಜೆಯನ್ನು ಮಾಡುವುದು ನಮ್ಮ ದೈಜಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಒಳ್ಳೆಯದು ಎಂದು ನಮ್ಮ ಪೂರ್ವಜರು ಆಶ್ವಯುಜ ಮಾಸದಲ್ಲಿ ನವರಾತ್ರಿಯ ಉತ್ಸವವನ್ನು ಆರಂಭಿಸುತ್ತಾರೆ. ಸಂಘರ್ಷ ಮತ್ತು ಹೋರಾಟಗಳು ಯುಗ ಯುಗಾಂತರಗಳಿಂದಲೂ ನಡೆದೇ ಇವೆ. ನವರಾತ್ರಿ ಉತ್ಸವ ದುಷ್ಟ ಶಕ್ತಿಗಳ ಮೇಲೆ ಸಾತ್ವಿಕತೆಯ ಜಯದ ಪ್ರತೀಕ ಅತ್ಯಾಚಾರ ಮಾಡಿದವರನ್ನು ಸಂಹಾರ ಮಾಡಿ ದೇವಿಯು ತನ್ನ ಪ್ರತಿ ರೂಪಗಳಿಂದಲೂ ತನ್ನ ಭಕ್ತರ ರಕ್ಷಣೆಯನ್ನು ಮಾಡಿರುತ್ತಾಳೆ. ರಾಮಾಖಣದಲ್ಲಿ ರಾಮನು ಪರಸ್ತ್ರೀ ವ್ಯಾಮೋಹಕ್ಕೆ ಒಳಗಾದ ರಾವಣನ ರಕ್ಕಸಿ ಪ್ರವೃತ್ತಿಯನ್ನು ಖಂಡಿಸಿ ತಿಳಿ ಹೇಳಿ ತಿದ್ದಿ ಕೊಳ್ಳದೇ ಹೋದಾಗ ಅವನ್ನು ದಂಡಿಸಿ ವಧಿಸಿದನು. ಕೌರವರು ಪರಧನಕ್ಕಾಗಿ ಆಸೆ ಪಟ್ಟು ಅನ್ಯಾಯ ಮಾಡುತತಲೇ ಬಂದಾಗ ಅವರಿಗೆ ಶ್ರೀ ಕೃಷ್ಣನು ಪಾಂಡವರ ಮೂಲಕ ಶಿಕ್ಷಿಸಿದನು. ಈ ಎಲ್ಲ ಕಥೆಗಳಲ್ಲಿ ಕೂಡ ನಮ್ಮ ಜೀವನಕ್ಕೆ ಬಹಳಷ್ಟು ಸಂದೇಶಗಳನ್ನು ನೀಡಲಾಗಿದೆ ಅವುಗಳನ್ನು ಅರಿತು ನಮ್ಮ ಜೀವನವನ್ನು ಉತ್ತಮವಾಗಿ ನಡೆಸಬೇಕು.

ಜೀವನದಲ್ಲಿ ಆಧ್ಯಾತ್ಮಿಕತೆ ಮತ್ತು ಧರ್ಮ ಮಾರ್ಗದಲ್ಲಿ ನಡೆಯುವುದು ಬಹಳ ಮುಖ್ಯವಾಗಿದೆ. ನಮ್ಮ ಜೀವನದಲ್ಲಿ ಶಿಸ್ತು ಸಂಯಮ ನಿಯಮಗಳನ್ನು ನಾವು ಪರಂಪರೆಯಿಂದಲೇ ಕಲಿಯುತ್ತೇವೆ ಅದಕ್ಕಾಗಿ

ಋತುಮಾನಕ್ಕೆ ಅನುಗುಣವಾಗಿ ಜೀವನ ಶೈಲಿಗೆ ಅನುಗುಣವಾಗಿ ಹತ್ತು ಹಲವು ಹಬ್ಬಗಳನ್ನೂ ಪೂಜೆ ಪುನಸ್ಕಾರಗಳನ್ನು ಮಾಡಿಕೊಂಡು ಬಂದಿರುತ್ತೇವೆ. ಆಧುನಿಕ ಪ್ರಪಂಚದಲ್ಲಿ ಮೊದಲಿನಂತೆ ಜೀವನ ಇಲ್ಲದೇ ಇರುವ ಕಾರಣ ಇಂದಿನ ಪರಿಸ್ಥಿತಿಯಲ್ಲಿ ಹಳೆಯ ಕಾಲದಂತೆ ಅಲ್ಲದೇ ಹೋದರೂ ಮಕ್ಕಳಲ್ಲಿ ನಮ್ಮ ಮುಂದಿನ ಪೀಳಿಗೆಗೆ ಭಕ್ತಿ ಮತ್ತು ಶ್ರದ್ಧೆಯನ್ನು ಉಳಿಸುವ ಹಬ್ಬವಾಗಿ ನವರಾತ್ರಿಯನ್ನು ಆಯಾ ಪ್ರಾಂತದ ಪದ್ಧತಿಯಂತೆ ಆಚರಿಸಬೇಕು.

ನವರಾತ್ರಿಯ ಸಾಮಾಜಿಕ ಮಹತ್ವ : ನವರಾತ್ರಿಯಲ್ಲಿ ಸಮಾಜದಲ್ಲಿ ಉತ್ಸವ, ಪೂಜೆ, ದಾನ ಅನ್ನ ಸಂತರ್ಪಣೆಗಳು ಹೆಚ್ಚಾಗಿ ನಡೆಯುತ್ತವೆ. ಈ ಎಲ್ಲ ಆಚರಣೆಗಳ ಹಿಂದೆ ಉತ್ತಮ ಸಮಾಜ ನಿರ್ಮಾಣ ಮತ್ತು ಅಭ್ಯಾಸಗಳನ್ನು ಮಾಡಿಸುವ ವಿಚಾರದಿಂದ ನಮ್ಮ ಪೂರ್ವಜರು ನಮಗಿಂತ ಹೆಚ್ಚು ಶಕ್ತಿಶಾಲಿಯಾದ ಒಂದು ಅಂಶವನ್ನು ದೇವರು ಎಂಬ ಬೋಧನೆಯಿಂದ ಅವನ ಪ್ರೀತಿಗಾಗಿ ಮಾಡುವ ಕಾರ್ಯ ಎಂದು ಹೇಳುವ ಮೂಲಕ ಉತ್ತಮ, ಆರೋಗ್ಯಕರ, ನೀತಿಯನ್ನು ಒಳಗೊಂಡ ವೈಜ್ಞಾನಿಕವಾಗಿರುವ ಅಭ್ಯಾಸಗಳನ್ನು ಮಾಡಿಸಿದ್ದಾರೆ.

ನವರಾತ್ರಿಯಲ್ಲಿ ಕುಮಾರೀ ಪೂಜನ ಬಹಳ ಮಹತ್ವವನ್ನು ಪಡೆದಿದೆ. ಮಹಿಳೆಯ ಶೀಲ ಮತ್ತು ಗೌರವಕ್ಕೆ ಧಕ್ಕೆ ಮಾಡುವ ಸಮಾಜ ನಿರ್ಮಾಣವಾಗುತ್ತ ಹೋದಂತೆ ಸ್ತ್ರೀ ಭ್ರೂಣ ಹತ್ಯೆ ಮತ್ತು ಹೆಣ್ಣು ಮಕ್ಕಳನ್ನು ಕೆಳದರ್ಜೆಯ ಪ್ರಜೆಗಳನ್ನಾಗಿ ನಡೆದುಕೊಳ್ಳುವ ಸಮಯದಲ್ಲಿ ಈ ಕುಮಾರಿ ಪೂಜನ ಬಹಳ ಮಹತ್ವದ ನೀತಿಯನ್ನು ಸಮಾಜಕ್ಕೆ ಕಲಿಸುತ್ತದೆ. ಹೆಣ್ಣು ಮಗುವೊಂದು ಉತ್ತಮ ಸಂಸ್ಕಾರ ವಿದ್ಯೆಯನ್ನು ಕಲಿತಾಗ ಅದು ಆ ಸಮಾಜದ ಉನ್ನತಿಯ ಮಾರ್ಗವಾಗಿದೆ. ಇಂತಹ ಸಾವಿರಾರು ಉದಾಹರಣೆಯನ್ನು ಇತಿಹಾಸದಲ್ಲಿ ಕೇಳಿದ್ದೇವೆ ನೋಡಿದ್ದೇವೆ. ಅಂತಹ ಹೆಣ್ಣುಮಕ್ಕಳನ್ನು ಪ್ರೀತಿಯಿಂದ ಬೆಳಸಿ ಅವಳಲ್ಲಿ ಉತ್ತಮ ಸಾಮರ್ಥ್ಯ ತುಂಬಿ ಸಶಕ್ತಳನ್ನಾಗಿ ಮಾಡಲು ಮೊದಲ ಹೆಜ್ಜೆ ಅವಳು ಸಣ್ಣ ಮಗುವಾಗಿದ್ದಾಗಿನಿಂದ ಅವಳಲ್ಲಿರುವ ವಿಶೇಷತೆ ಮತ್ತು ಶ್ರೇಷ್ಠತೆಯ ಪರಿಚಯ ಮಾಡಿಸುವುದು ಆಗಿದೆ. ಈ ಕೆಲಸವನ್ನು ಕುಮಾರಿ ಪೂಜನದ ಮೂಲಕ ನಮ್ಮ ಪೂರ್ವಜರು ಮಾಡಿದ್ದಾರೆ

ಪುರುಷರಲ್ಲಿ ವೀರತ್ವ, ಧರ್ಮದಿಂದ ಬದುಕುವ ಮಾರ್ಗದರ್ಶನ, ಸುವ್ಯವಸ್ಥಿತ ಹಾಗೂ ಸುರಕ್ಷಿತ ಸಮಾಜ ನಿರ್ಮಾಣದಲ್ಲಿ ನವರಾತ್ರಿ ಹಬ್ಬದ ಆಚರಣೆ ಹಾಗೂ ಸಂದೇಶ ಮಹತ್ವದ ಪಾತ್ರ ವಹಿಸುತ್ತದೆ.

ನವರಾತ್ರಿಯ ವೈಜ್ಞಾನಿಕ ಮಹತ್ವ : ನವರಾತ್ರಿಯಲ್ಲಿ ಒಂಭತ್ತು ಚಕ್ರಗಳನ್ನು ಜಾಗೃತಗೊಳಿಸುವುದು, ಪೂಜೆ ಆರಾಧನೆ, ಸಂಪ್ರದಾಯ, ಉಪವಾಸ ಮೊದಲಾದವುಗಳ ಮೂಲಕ ಹಬ್ಬವನ್ನು ಆಚರಿಸುತ್ತೇವೆ. ಪ್ರಕೃತಿ ಪೂಜೆಯು, ಸಾಧನೆಯನ್ನು ಕೂಡ ಮಾಡುತ್ತಾರೆ. ಇವೆಲ್ಲವೂ ವೈಜ್ಞಾನಿಕ ಮಹತ್ವ ಪಡೆದಿದೆ.

ನವರಾತ್ರಿಯ ಕಾಲದಲ್ಲಿ ಮಳೆಗಾಲದಿಂದ ಚಳಿಗಾಲಕ್ಕೆ ಬದಲಾಗುವ ಸಮಯವಾಗಿದೆ. ಇಂತಹ ಬದಲಾವಣೆಯ ಸಮಯದಲ್ಲಿ ಹೆಚ್ಚಾಗಿ ರೋಗ ರುಜಿನಗಳು ಆರೋಗ್ಯ ಸಮಸ್ಯೆಗಳು ಬರುತ್ತವೆ. ಮಳೆಗಾಲದಲ್ಲಿ ಇರುವ ವಾತಾವರಣ ಮತ್ತು ಆಹಾರ ಪದ್ಧತಿಯ ಬದಲಾಗಿ ಮುಂದಿನ ನಾಲ್ಕು ತಿಂಗಳುಗಳಲ್ಲಿ ಬೇರೆ ರೀತಿ ಊಟೋಪಚಾರ ಆಹಾರ ವಿಹಾರಗಳನ್ನು ಅಭ್ಯಾಸ ಮಾಡಿಕೊಳ್ಳಲು ಆಶ್ವಯುಜ ಮಾಸ ಮೊದಲಾಗುತ್ತದೆ. ಈ ಮಳೆಗಾಲದ ಆರಂಭದಲ್ಲಿ ಕಫ ಉತ್ಪನ್ನ ಮಾಡುವ ಮೊಸರನ್ನು ಬಳಸುತ್ತಿರುವುದಿಲ್ಲ. ಈ ಬದಲಾವಣೆಯ ಸಮಯದಲ್ಲಿ ದವನ ಧಾನ್ಯಗಳಲ್ಲಿ ಹುಳಗಳಾಗುವ ಸಂಭವ ಹೆಚ್ಚಾಗುವುದರಿಂದ ಬೇಳೆಕಾಳುಗಳನ್ನು ಮತ್ತು ತರಕಾರಿಗಳನ್ನು ಬಳಸುವುದಿಲ್ಲ.

ಉಪವಾಸದಲ್ಲಿ ಸಾತ್ವಿಕ ಆಹಾರವನ್ನು ತಿನ್ನಲಾಗುತ್ತದೆ. ಇದರಿಂದ ಹೆಚ್ಚಿನ ಮಸಾಲೆ ಜೀರ್ಣಕ್ರಿಯೆಗೆ ಬಾಧಕವಾದ ಅಂಶಗಳು ನಮ್ಮ ದೇಹದಲ್ಲಿ ಹೆಚ್ಚು ಪ್ರಮಾಣದ ಹಾನಿಕಾರಕ ಟಾಕ್ಸಿನ್‌ಗಳು ಶೇಖರವಾಗುವುದನ್ನು ಕಡಿಮೆ ಮಾಡಿ ಆರೋಗ್ಯ ಕಾಪ್ಡಿಕೊಳ್ಳಲು ಸಹಾಯಕವಾಗಿರುತ್ತದೆ. ಮನುಷ್ಯನ ಆರೋಗ್ಯ ಅವನ ಮನಸ್ಥಿತಿಗೆ ಕಾರಣವಾಗುವುದರಿಂಧ ಈ ಸಮಯದ ಆಹಾರ ವಿಹಾರದ ಪದ್ಧತಿಯಿಂದ ಮನಷ್ಯನ ಚಿಂತೆಗಳು ಪರಿಹಾರವಾಗಿ ಆನಂದದಿಂದ ಇರುತ್ತಾನೆ.

ಈ ಸಮಯದಲ್ಲಿ ಹಗಲು 12 ತಾಸು ರಾತ್ರಿಯೂ 12 ತಾಸುಗಳು ಇರುತ್ತವೆ ಇದನ್ನು ಇಕ್ವಿನಾಕ್ಸ್ ಎಂದು ಕರೆಯಲಾಗುತ್ತದೆ ಇಂತಹ ಸಮಯದಲ್ಲಿ ಕತ್ತಲು ಬೆಳಕು ಸಮ ಪ್ರಮಾಣದಲ್ಲಿರುತ್ತದೆ. ಬೇಸಿಗೆಕಾಲದಲ್ಲಿ ಹಗಲು ಹೆಚ್ಚು ರಾತ್ರಿ ಕಡಿಮೆ, ಚಳಿಗಾಲದಲ್ಲಿ ರಾತ್ರಿ ಹೆಚ್ಚು ಹಗಲು ಕಡಿಮೆ ಇರುತ್ತದೆ. ಈ ಕಾಲದಲ್ಲಿ ಅರ್ಧ ರಾತ್ರಿ ಅರ್ಧ ಹಗಲು ಇರುವುದರಿಂದ ಈ ಕಾಲದ ವಾತಾವರಣದಲ್ಲಿ ಉಪವಾಸ ಧ್ಯಾನ ಮೊದಲಾದ ಸಾಧನೆಗಳು ಮನುಷ್ಯನ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಸರಿಯಾಗಿ ಗಮನ ಹರಿಸಬೇಕಾದ ಸಮಯವೇ ಆಗಿರುತ್ತದೆ.

ನವರಾತ್ರಿಯಲ್ಲಿ ಪರಿಸರ ಮತ್ತು ವಾತಾವರಣ ಬಣ್ಣಗಳಿಂದ ಶೃಂಗಾರಗೊಂಡು ಆನಂದಮಯವಾಗಿರುತ್ತದೆ ಹೂವುಗಳು ಚೆನ್ನಾಗಿ ಅರಳಿನಿಂತಿರುತ್ತವೆ ಅವುಗಳಿಂದ ದೇವಿಯ ಆರಾಧನೆಯನ್ನು ಒಂದೊಂದು ಬಣ್ಣಗಳ ಪ್ರತೀಕಗಳನ್ನು ಅರಿತು ನವದೇವಿಯರ ಪೂಜೆಯನ್ನು ಮಾಡಲಾಗುತ್ತದೆ.

ನವರಾತ್ರಿಯ ಸಮಯದ ಉಪವಾಸದಲ್ಲಿ ವಿವಿಧ ರೀತಿಯಲ್ಲಿ ಉಪವಾಸವನ್ನು ಮಾಡುತ್ತಾರೆ. ಕೇವಲ ನೀರನ್ನು ಸೇವಿಸಿ ಉಪವಾಸ ಕೇವಲ ಫಲಾಹಾರದ ಉಪವಾಸ, ಬೇಯಿಸದೇ ಮಾಡಿದ ಪದಾರ್ಥಗಳನ್ನು ತಿಂದು ಉಪವಾಸ, ನಿಷಿದ್ಧ ಅಂದರೆ ತಾಪಸಿ ಪದಾರ್ಥಗಳನ್ನು ಸೇವಿಸದೇ ಉಪವಾಸಗಳನ್ನು ಮಾಡುತ್ತಾರೆ. ಈ ಬಗೆಯಲ್ಲಿ ಉಪವಾಸಗಳನ್ನು ಅವರ ದೈಹಿಕ ಮತ್ತು ಆತ್ಮ ಶಕ್ತಿಯ ಅನುಸಾರ ಮಾಡುತ್ತಾರೆ. ಅತೀ ಸಾತ್ವಿಕ ಆಹಾರವನ್ನು ಸೇವಿಸುವವರು ದೇಹದಲ್ಲಿ ಊತ್ತಮ ಶಕ್ತಿಯನ್ನು ಉಳ್ಳವರು ಕೇವಲ ನೀರಿನ ಸೇವನೆಯಿಂದ ಉಪವಾಸ ಮಾಡುತ್ತಾರೆ. ಹೀಗೆ ನಮ್ಮ ಆಹಾರ ಮತ್ತು ಉಪವಾಸಗಳು ನಮ್ಮ ಆರೋಗ್ಯದ ಮೇಲೆ ಪರಿಣಾಮವನ್ನು ಬೀರುತ್ತವೆ.

ನವರಾತ್ರಿಯ ಸಮಯದಲ್ಲಿ ಪೂಜೆ ಮತ್ತು ಮಂತ್ರ ಜಪ ಅನುಷ್ಠಾನಗಳನ್ನು ಮಾಡುತ್ತಾರೆ. ಇದರಿಂದ ನಮ್ಮ ದೇಹದ ಚಕ್ರಗಳು ಜಾಗೃತಗೊಳ್ಳುತ್ತವೆ. ನಮ್ಮಲ್ಲಿ ಎಲ್ಲ ರೀತಿಯಲ್ಲಿ ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ಜಾಗೃತಗೊಳಿಸಿ ದುಷ್ಟ ಶಕ್ತಿಗಳ ಜೊತೆಗೆ ಹೋರಾಡಲು ಪ್ರೇರಣೆಯನ್ನು ನೀಡಿ ನಮ್ಮನ್ನು ಜೀವನದಲ್ಲಿ ಜಯಶಾಲಿಗಳನ್ನಾಗಿ ಮಾಡುವ ಶಕ್ತಿಯನ್ನು ನಮ್ಮಲ್ಲಿ ನಾವು ಈ ಸಮಯದಲ್ಲಿ ಜಾಗೃತಗೊಳಿಸಬಹುದಾಗಿದೆ. ಇಲ್ಲಿ ನವ ಎಂದರೆ ಕೇವಲ ಒಂಭತ್ತು ಅಲ್ಲದೇ ನವ ಎಂದರೆ ಹೊಸದಾದ ಎಂದೂ ಕೂಡ ಅರ್ಥ ಮಾಡಿಕೊಳ್ಳಬಹುದು. ನಮ್ಮ ಜೀವನದಲ್ಲಿ ನವಚೈತನ್ಯವನ್ನು ಹೊಸ ಶಕ್ತಿಯನ್ನು ಪಡೆದುಕೊಳ್ಳುವ ಕಾಲ ನವರಾತ್ರಿ.

ನವರಾತ್ರಿಯಲ್ಲಿ ದೇವಿಯ ಪ್ರಸನ್ನತೆಯ ಸಲುವಾಗಿ ಅನೇಕ ಹೋಮ ಹವನಾದಿಗಳನ್ನು ಮಾಡುತ್ತಾರೆ. ಇದರಿಂದ ವಾತಾವರಣದಲ್ಲಿ ಹಾನಿಕಾರಕ ಬ್ಯಾಕ್ಟಿರಿಯಾಗಳು , ಹಾನಿಕಾರಕ ವಸ್ತುಗಳು ನಾಶವಾಗಿ ವಾತಾವರಣವು ಪರಿಶುದ್ಧವಾಗಿ ಆರೋಗ್ಯಯುತ ವಾತಾವರಣವನ್ನು ಸೃಷ್ಟಿಸುತ್ತದೆ.

ಧ್ಯಾನ ದೇವರ ವರ

ಮುದ್ದುರಾಮನ ಅರಿವು ಭಾಗ- ೨

ಡಾ. ಪ್ರದೀಪಕುಮಾರ ಹೆಬ್ರಿ
98440 18457

ಕಾಯಕತ್ತಲೆ ಕಳೆವ, ಮನದ ಮೈಲಿಗೆ ತೊಳೆವ
ಗುರುಮೂರ್ತಿಯಿಂದ ಭಾವಸೂತಕವಿಲ್ಲ,
ತೆನೆಗಟ್ಟಿ ನಿರ್ಮಲತೆ ನಿಶ್ಚಿಂತ ಅನುಭೂತಿ
ಗುರುವಚನ ದಿಕ್ಸೂಚಿ– ಮುದ್ದುರಾಮ

ನಾವು ಎಚ್ಚೆತ್ತಾಗ ಮಾತ್ರ ಮನೋಭೂಮಿಯಲ್ಲಿ ದೈವತ್ವ ಪ್ರಜ್ಞೆಯನ್ನು ಕಾಣಬಹುದು. ನಮ್ಮ ಮನೋಭಾವ ದೇವಾಭಿಮುಖವಾಗಿದ್ದರೆ ಅರಿವಿಗೆ ಬರುವುದೇ ಸಾಮಿಪ್ಯದಲ್ಲಿಹನು ಕೂಗಳತೆಯಲ್ಲಿ ಎಂದು. ದೇವನೊಲವ ದಿವ್ಯಬೆಳಕಲ್ಲಿ ಅಮರತೆಯ ಸನ್ನೆಯಿದೆ. ಭಗವಂತನೆಂದರೆ ಹಣ್ಣಿನ ಸವಿರುಚಿ. ನಾವು ಗಿಡ, ಹೂವು, ಹಣ್ಣು, ಕಾಯಿ ಎಲ್ಲವನ್ನೂ ಕಾಣುತ್ತೇವೆ. ಆದರೆ ಹಣ್ಣಿನ ಸವಿರುಚಿಯ ಕಾಣಲಾರೆವು. ಹೂವಿನ ಬಣ್ಣ, ರೂಪ, ಅಂದ ಕಾಣುತ್ತೇವೆ. ಆದರೆ ಹೂವಿನೊಳಗೇ ಇರುವ ಸುಗಂಧವ ಕಾಣಲಾರೆವು. ಸುಗಂಧ ನಮಗೆ ಕಾಣುವುದಿಲ್ಲ ಎಂದಾದರೆ ಅದು ಇಲ್ಲ ಎಂದಲ್ಲ. ಅದನ್ನು ಕಾಣುವ ಮಾರ್ಗವೇ ಬೇರೆ. ಅದು ಅಂತಃಕರಣದರಿವು, ಹೃದಯವೇದ್ಯ. ಅದರಂತೆ ಕರುಣ ನಿಜದೆದೆಯ ಪರಮಭಕ್ತಿಯಿಂದ ಭಗವಂತನ ಆರಾಧಿಸಿದರೆ ನಿಶ್ಚಿತವಾಗಿ ಸಲಹುವನು ಕೃಪೆಯಿಂದ. ಅವನೊಲಿದರೆ ಬರಡುನೆಲ ಹಸಿರನೆಲವಾಗುವುದು ನಿಶ್ಚಿತ. ಕೇವಲ ಹೊರತೋರಿಕೆಗೆ ಭಕ್ತಿ ತೋರಿದರಾವ ಫಲವಿಲ್ಲ. ಉಪಕಾರದೊಡಲಲ್ಲಿ ಇದೆ ವಿನಯ ಭಾವಸಿರಿ ಭಾವದಲ್ಲಿ ನಾವಿರಲು ತ್ರಿಕರಣ ಶುದ್ಧಿಯನ್ನು ಭಕ್ತಿಯನ್ನಾಗಿಸಿ ಸುವಿಚಾರಗಳನ್ನು ನೈವೇದ್ಯವಾಗಿಸಿ ನಮ್ರತೆಯ ಬದಿಯಲ್ಲಿ ದಿವ್ಯತೆಯ ದೀಪವಿದೆ ಎಂದರಿತು ಇದ್ದೂ ಇಲ್ಲದ ತೆರದಿ ಬಾಳ್ವೆಯ ಸಾಗಿಸಿದರೆ ನಿಶ್ಚಿಂತೆಯ ಅನುಭೂತಿ. ಅದೇ ಸುಖಬಾಳ ದಿಕ್ಸೂಚಿ.



ಕ.ಸಿ.ಶಿವಪ್ಪ

ನಮ್ಮ ಬದುಕ ದಾರಿಯಲ್ಲಿ ಬಯಲು, ಬೆಳಗು, ಅರಿವು, ಮರೆವು ಎಲ್ಲವೂ ಇದೆ. ನೋಡಿದಷ್ಟಿದೆ ಕಣ್ಗೆ ಕಡಲ ವಿಸ್ತಾರ. ಬೇಡನಾಗಿದ್ದ ವಾಲ್ಮೀಕಿ ಋಷಿಯಾದಾಗ ಹೃದಯ ಪರಿವರ್ತನೆಯಿಂದ ಕಂಗೊಳಿಸಿದಂತೆ ಎದೆಯಿಂದ ಹೊರಬಂದ ನುಡಿ ಕರುಣರಸ ಭರಿತವಾದ ಶೋಕಗೀತೆ. ಅದೇ ಶ್ಲೋಕವಾಯಿತು. ಇದೇ ರಾಮಾಯಣದ ಆದಿವಾಕ್ಯವಾಯಿತು! ಇದಕ್ಕೆ ಮೂಲವೇ ಬೇಡನು ನೆಲಕ್ಕುರುಳಿಸಿದ ಪಕ್ಷಿಯನ್ನು ಮೇಲೆತ್ತಿ ಕಾಪಾಡಿದ ಋಷಿಗಳೋರ್ವರ ಕರುಣೆ. ಪ್ರೀತಿ. ದೇವಕರುಣೆ ಇರದಿದ್ದಲ್ಲಿ ನೀರೆಲ್ಲಿ ಕೆರೆಯೆಲ್ಲಿ ರುಚಿರುಚಿಯ ಹಾಲೆಲ್ಲಿ ಚಂದನದ ತರುವಿನಲಿ ಅಪರಿಮಿತ ಕಂಪೆಲ್ಲಿ ಎಂದರಿವಾದಂತೆ 'ಪರಮಾತ್ಮ' ಎನುವ ದಿವ್ಯತೆಯ ಗಾನದಲಿ ತನ್ಮಯತೆಯ ತಾನವನ್ನು ಮನಗಂಡು ಹರಿಚಿತ್ತ ರಸಚಿತ್ರ ಎಂಬ ಸವಿಭಾವದ ಒಡೆಯರಾಗಬಹುದು.

ಈ ಜಗತ್ತಿನಲ್ಲಿ 'ಇಲ್ಲ' ಎಂಬುದು 'ಇದೆ' ಎಂದಾಗಲು ಸಾಧ್ಯವೇ ಇಲ್ಲ. ಭಗವಂತನೊಲಿದು ಹರಸಿದರೆ ಮಾತ್ರ ಬರೆವ ಬೆರಳಲಿ ಅಮಿತ ಶಕ್ತಿ ತುಂಬಿ ಬರೆವಣಿಗೆಯೆನುವ ವರಕಲೆ ಸಿದ್ಧಿಸುತ್ತದೆ. ಆಗ ಮನಸ್ಸು ಗುನುಗಿ ಅಕ್ಷರವಾಗಿಸಿ ಪದ್ಯವಾಗಿಸಿದ್ದು:– ತಂಪನೀವನು ಚಂದ್ರ ಹುಣ್ಣಿಮೆಯ ರೂಪದಲಿ/ ಚೆಲುವ ತೋರ್ವುದು ಕಡಲು ತೆರೆಯ ರೂಪದಲಿ/ ಸತ್ವ ಸಾರ್ವುದು ಬಾನು ತಾರೆಗಣ ರೂಪದಲಿ/ಲೋಕ ದೇವನ ರೂಪ ಎಂದು. ಸದಾ ಎದೆದನಿಯಾಗಿಸಬೇಕಾದ ಮಾತೇ,ಬಯಲ ದೆಸೆದೆಸೆಯಲ್ಲಿ ಇವನಲ್ಲದಿನ್ನಾರು ಎಂಬುದು ಮಾತ್ರ.



ಸಡಗರದ ಜಂಬೂ ಸವಾರಿಯ ಗಜಪಡೆಗಳ ವೈಭವ

। ಡಾ. ಆರ್ ಶೈಲಜ ಶರ್ಮ, ಬೆಂಗಳೂರು.

ನವರಾತ್ರಿಯಲ್ಲಿ ಪ್ರತಿ ದಿನ ಒಂದೊಂದು ದೇವಿಯ ಸಡಗರದೊಂದಿಗೆ ಕಳೆಕಟ್ಟಿದರೆ, ವಿಜಯದಶಮಿಯ ದಿನದ ಪ್ರಮುಖ ಆಕರ್ಷಣೆ "ಜಂಬೂಸವಾರಿ" ಯಾಗಿರುತ್ತದೆ. ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿಯಲ್ಲಿ ನಾಡ ದೇವತೆ ಅಂಬಾರಿಯಲ್ಲಿ 'ಶ್ರೀಚಾಮುಂಡೇಶ್ವರಿಯ ಮೂರ್ತಿ'ಯನ್ನು ಹೊತ್ತು ಸಾಗುವ ಅದೃಷ್ಟ ಪ್ರಶಾಂತ ಆನೆಗೆ ದೊರೆತಿದೆ. ಹೆಸರಿಗೆ ತಕ್ಕಂತೆ ಶಾಂತ ಸ್ವಭಾವವನ್ನು ಹೊಂದಿರುವ ಪ್ರಶಾಂತ ಆನೆ. ಸತತವಾಗಿ 18 ವರ್ಷಗಳಿಂದಲೂ ಜಂಬೂಸವಾರಿಯಲ್ಲಿ ಪಾಳ್ಗೊಳ್ಳುತ್ತಿದೆ. ಈ ಬಾರಿ ಅಂಬಾರಿ ಹೊರುತ್ತಿದೆ. ಅಂಬಾರಿ ಹೊರುತ್ತಿರುವ 13ನೇ ಆನೆ ಇದಾಗಿದೆ.

ನಮ್ಮ ನಾಡಿನವರಲ್ಲದೆ ಹೊರ ರಾಜ್ಯ ಹಾಗೂ ದೇಶ, ವಿದೇಶಗಳಿಂದಲೂ ಜನರು ಜಂಬೂಸವಾರಿ ವೀಕ್ಷಣೆಗಾಗಿ ಸಾಗರೋಪಾದಿಯಲ್ಲಿ ಸೇರುತ್ತಾರೆ. ಇಡೀ ಮೈಸೂರು ನಗರವೇ ದಸರಾ ಉತ್ಸವಕ್ಕೆ ಸಿಂಗರಿಸಿಕೊಳ್ಳುತ್ತವೆ. ಜಂಬೂಸವಾರಿ ಸಾಗುವ ರಾಜಮಾರ್ಗವಲ್ಲದೇ ನಗರದ ಪ್ರಮುಖ ರಸ್